ವಿಶ್ವ ಕಾರ್ಮಿಕರೇ ಒಂದಾಗಿ ! WORKERS OF THE WORLD UNITE ವಿಶ್ವ ಕಾರ್ಮಿಕರೇ ಒಂದಾಗಿ !

दुनिया के मज़दूरों संघटित हो ! உலக தொழிலாளர்களே ஒன்றுபடுங்கள் دنیا کے مزدورو متحد ہو

KARNATAKA GARMENT WORKERS UNION

# ಸರ್ವಸದಸ್ಯರ ಸಭೆ

**ಭಾನುವಾರ, 16ನೇ ಡಿಸೆಂಬರ್ 2018**

ಸ್ಥಳ : ಶ್ರೀ ರವಿನಂದನ ಪ್ಯಾಲೇಸ್ ಮತ್ತು ಶ್ರೀ ಶಿವಕುಮಾರ್ ಕಲ್ಯಾಣ ಮಂಟಪ
(ಸಿ. ಜಯಮ್ಮ ಕಾಂಪ್ಲೆಕ್ಸ್, ಗೊಲ್ಲರಹಟ್ಟಿ), ಮಾಗಡಿ ಮುಖ್ಯರಸ್ತೆ, ವಿಶ್ವನೀಡಂ, ಬೆಂಗಳೂರು – 91

## 2016–2018

# ವರದಿ

**ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ಕೂಗು] (ನೋಂ)**

# 9/12, 4ನೇ ಅಡ್ಡರಸ್ತೆ, 15ನೇ ಮುಖ್ಯರಸ್ತೆ, ರಾಜಪ್ಪರೆಡ್ಡಿ ಬಿಲ್ಡಿಂಗ್, ಎನ್.ಜಿ.ಆರ್. ಬಡಾವಣೆ,
ರೂಪೇನ ಅಗ್ರಹಾರ, ಹೊಸೂರು ರಸ್ತೆ, ಬೆಂಗಳೂರು – 68.
ಮೊಬೈಲ್ : 9880016173 / 9341224947 / 9986482120 / 9448895667

ದುನಿಯಾ ... दुनिया के मज़दूरों संघटित हो ! உலக தொழிலாளர்களே ஒன்றுபடுங்கள் دنیا کے مزدورو متحد ہو

ವಿಶ್ವ ಕಾರ್ಮಿಕರೇ ಒಂದಾಗಿ ! WORKERS OF THE WORLD UNITE ವಿಶ್ವ ಕಾರ್ಮಿಕರೇ ಒಂದಾಗಿ !

[redacted]

# ಪರಿವಿಡಿ


| ವಿಷಯ | ಪುಟ ಸಂಖ್ಯೆ |
|---|---|
| 1 2016–18ರ ಅವಧಿಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ | |
| 2 ಪೀಠಿಕೆ | 1 |
| 3 ವರದಿ | 2–10 |
| 4 ಅನುಬಂಧಗಳು – 1 | |
| 1 ಲೆಕ್ಕಪರಿಶೋದಿತ ಪಟ್ಟಿ 2016 | 11 |
| 2 ಲೆಕ್ಕಪರಿಶೋದಿತ ಪಟ್ಟಿ 2017 | 12 |
| 5 ಅನುಬಂಧಗಳು –2 | |
| ಪಾಂಪ್ಲೆಟ್ಸ್ | |
| 1 ಗಾರ್ಮೆಂಟ್ ಕಾರ್ಮಿಕರೇ, ನೀವು ಟೇಲರಾ? ಹೆಲ್ಪರಾ? | 13 |
| 2 ಮೇ ದಿನ 2017, ಗಾರ್ಮೆಂಟ್ ಕಾರ್ಮಿಕ ಮಕ್ಕಳ ಕೌಶಲ್ಯ ಪ್ರದರ್ಶನ | 14–15 |
| 3 ನಮ್ಮ ಐಕ್ಯತೆಯ ಸಾಧನೆ ! ಎಲ್ಲಾ ಕಾರ್ಮಿಕರಿಗೂ ಅನುಕೂಲ ! | 16–17 |
| 4 ಸಮಾನತೆ ! ದುಡಿಯುವ ಮಹಿಳೆಯರ ಆಚಿದೋಲನಾ | 18–19 |
| 5 ಕೂಲಿ ಹೆಚ್ಚಳ ಆಗಲೇಬೇಕು ! | 20–21 |
| 6 ಲೈಂಗಿಕ ಕಿರುಕುಳ – ವಿರೋದಿ ಜನ ಚಳುವಳಿ | 22 |
| 7 ಕೌಟುಂಬಿಕ ಹಿಂಸೆಯಿಂದ ಮಹಿಳೆಯರಿಗೆ ರಕ್ಷಣೆ ಕಾಯ್ದೆ, 2005 | 23 |
| 8 ಗೌರವಯುತ ಸಾಮೂಹಿಕ ಚೌಕಾಸಿಗಾಗಿ ! | 24–25 |
| 9 ಮಹಿಳಾ ಘನತೆಗಾಗಿ | 26 |


[redacted]

# ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ KOOGU ]

ಸರ್ವಸದಸ್ಯರ ಸಭೆ 16.12.2018
2016–18ರ ವರದಿ

## 2016–18ರ ಅವಧಿಯ ಕಾರ್ಯಕಾರಿ ಸಮಿತಿ

| | | |
|---|---|---|
| 1. | ಶ್ರೀ ಸೆಬಾಸ್ಟಿಯನ್ ದೇವರಾಜ್ | ಗೌರವ ಅಧ್ಯಕ್ಷರು |
| 2. | ಶ್ರೀಮತಿ ವಿನೋದ | ಅಧ್ಯಕ್ಷರು |
| 3. | ಶ್ರೀಮತಿ ರತಿ | ಉಪಾಧ್ಯಕ್ಷರು |
| 4. | ಶ್ರೀ ಸ್ವಾಮಿ ಟಿ ಎಸ್ | ಪ್ರಧಾನ ಕಾರ್ಯದರ್ಶಿ |
| 5. | ಶ್ರೀ ಬಸವರಾಜ್. ಎಸ್ | ಸಂಘಟನಾ ಕಾರ್ಯದರ್ಶಿ |
| 6. | ಶ್ರೀ ಮಹೇಶ್ ಪಿ | ಸಂಘಟನಾ ಕಾರ್ಯದರ್ಶಿ |
| 7. | ಶ್ರೀಮತಿ ಸುಮಿತ್ರ | ಖಜಾಂಚಿ |
| 8. | ಶ್ರೀಮತಿ ನಾಗರತ್ನ | ಜಂಟಿ ಕಾರ್ಯದರ್ಶಿ |
| 9. | ಶ್ರೀಮತಿ ಭಾಗ್ಯ | ಜಂಟಿ ಕಾರ್ಯದರ್ಶಿ |
| 10. | ಶ್ರೀಮತಿ ಮಾದೇವಿ | ಸದಸ್ಯರು |
| 11. | ಶ್ರೀಮತಿ ಪುಷ್ಪಾವತಿ | ಸದಸ್ಯರು |
| 12. | ಶ್ರೀ ರಾಜಶೇಖರ್ | ಸದಸ್ಯರು |
| 13. | ಶ್ರೀ ಮೋಹನ್ | ಸದಸ್ಯರು |
| 14. | ಶ್ರೀ ಪೆರುಮಾಳ್ | ಸದಸ್ಯರು |
| 15. | ಶ್ರೀಮತಿ ಸುಮಾ | ಸದಸ್ಯರು |
| 16. | ಶ್ರೀ ರಾಮೂ | ಸದಸ್ಯರು |
| 17. | ಶ್ರೀಮತಿ ರಾಜೇಶ್ವರಿ | ಸದಸ್ಯರು |
| 18. | ಶ್ರೀಮತಿ ಮಹೇಶ್ವರಿ | ಸದಸ್ಯರು |
| 19. | ಶ್ರೀಮತಿ ಭಾಗ್ಯ ಎಂ. ಬಿ. | ಸದಸ್ಯರು |
| 20. | ಶ್ರೀಮತಿ ಶಾಂತಮ್ಮ | ಸದಸ್ಯರು |
| 21. | ಶ್ರೀಮತಿ ಸುಜಾತ | ಸದಸ್ಯರು |

# ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ KOOGU ]

ಸರ್ವಸದಸ್ಯರ ಸಭೆ 16.12.2018 – 2016–18ರ ವರದಿ

**ಪೀಠಿಕೆ:**

ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ಕೂಗು] ವಿನ ಕಳೆದ ಸರ್ವ ಸದಸ್ಯರ ಸಭೆ ನವೆಂಬರ್ 2016ರಲ್ಲಿ ನಡೆದಿರುತ್ತದೆ. ಇದೇ ವರ್ಷದ ಏಪ್ರಿಲ್‌ನಲ್ಲಿ ದೇಶದ ಕಾರ್ಮಿಕರ ಪಿ.ಎಫ್ ಹಣವನ್ನು ಕಿತ್ತುಕೊಳ್ಳಲು ಹುನ್ನಾರ ಹಾಕಿದ್ದ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಬೆಂಗಳೂರಿನಲ್ಲಿ ಬೃಹತ್ ಹೋರಾಟಕ್ಕೆ ಗಾರ್ಮೆಂಟ್ಸ್ ಕಾರ್ಮಿಕರು ಮುಂದಾಳತ್ವವನ್ನು ನೀಡಿದರು. ಈ ಐತಿಹಾಸಿಕ ಹೋರಾಟವು ಕಾರ್ಮಿಕರು ಒಂದಾದರೆ ಏನೆಲ್ಲಾ ಸಾಧಿಸಬಹುದು ಎಂಬುದನ್ನು ಪ್ರಪಂಚಕ್ಕೆ ಮತ್ತೆ ತೋರಿಸಿತು. ಕಾರ್ಮಿಕ ವಿರೋಧಿ ಪಿ.ಎಫ್ ತಿದ್ದುಪಡಿಯನ್ನು ಎರಡೇ ದಿನದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟದಿಂದ ಕೇಂದ್ರ ಸರ್ಕಾರ ತನ್ನ ಆದೇಶವನ್ನು ಹಿಂದಕ್ಕೆ ಪಡೆದು. ದೇಶದ 'ಕೋಟ್ಯಾಂತರ ಕಾರ್ಮಿಕರಿಗೆ ನ್ಯಾಯ ದೊರಕಿತು. ನಂತರದ ದಿನಗಳಲ್ಲಿ ಯೂನಿಯನ್ ಹೆಚ್ಚಿನ ಬಲಪಡೆದು ಸದಸ್ಯತ್ವವೂ ಹೆಚ್ಚಾಗಿರುತ್ತದೆ. ಕಾರ್ಮಿಕರ ಕೆಲಸದ ಪರಿಸ್ಥಿತಿಯನ್ನು ಹಾಗೂ ವೇತನವನ್ನು ಉತ್ತಮಗೊಳಿಸುವ ಆಡಳಿತ ವರ್ಗದೊಂದಿಗೆ ಸಾಮೂಹಿಕ ಚೌಕಾಸಿಯ ಪ್ರಕ್ರಿಯೆಯನ್ನು ಬಲಪಡಿಸಲು ಯೂನಿಯನ್ನನ್ನು ಒತ್ತಾಯಿಸಿದರು. ಇದು ಒಂದು ಸಕಾರಾತ್ಮಕ ಬೆಳವಣಿಗೆ. ಇದು ಮಾತ್ರವಲ್ಲದೇ ಕಾರ್ಮಿಕರ ಹಲವಾರು ಕಾರ್ಮಿಕರು ಸರ್ಕಾರದ ನೀತಿಗಳ ಬಗ್ಗೆ ಇನ್ನು ಹೆಚ್ಚಿಗೆ ತಿಳಿದುಕೊಳ್ಳುವ ಅವಶ್ಯಕತೆಯನ್ನು ವ್ಯಕ್ತಪಡಿಸಿದರು. ಕಾರ್ಮಿಕರ ಪ್ರಜ್ಞೆಯಲ್ಲಿ ಸಕಾರಾತ್ಮಕ ಬೆಳವಣಿಗೆಯಿಂದ ಯೂನಿಯನ್ ಸಾಮೂಹಿಕ ಚೌಕಾಸಿ ಪ್ರಕ್ರಿಯೆ ಪ್ರಾರಂಭ ಮಾಡಲು ಅನುಕೂಲವಾಯಿತು. ಹಲವಾರು ಅಂತರಾಷ್ಟ್ರೀಯ ಬ್ರ್ಯಾಂಡ್‌ಗಳಿಗೆ ರಫ್ತು ಮಾಡುವ ದೊಡ್ಡ–ದೊಡ್ಡ ಕಂಪನಿಗಳಲ್ಲಿ ಸಾಮೂಹಿಕ ಚೌಕಾಸಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗಿದೆ. ಗಾರ್ಮೆಂಟ್ ಕೈಗಾರಿಕೆಯು ಕೇವಲ ಒಂದೆರಡು ಫ್ಯಾಕ್ಟರಿಗಳಿಗೆ ಸೀಮಿತವಾಗಿಲ್ಲ. ಬದಲಿಗೆ, ಉತ್ಪಾದಿಸುವ ಕಾರ್ಮಿಕರಿಂದ ಹಿಡಿದು ಬಳಸುವ ಗ್ರಾಹಕರವರೆಗೂ ಅತೀ ಹೆಚ್ಚು ಲಾಭ ಪಡೆಯುವ ಪೈಪೋಟಿಯಲ್ಲಿರುವ ಬಲಿಷ್ಠ ಮಧ್ಯವರ್ತಿಗಳು ಒಳಗೊಂಡಂತೆ ಜಾಗತಿಕ ಮಟ್ಟದಲ್ಲಿ ವಿಶ್ವದ ಉದ್ಯಗಲಕ್ಕೂ ಒಂದು ಸರಪಳಿ ಇರುತ್ತದೆ ಎಂದು ಯೂನಿಯನ್ ಗುರುತಿಸಿಕೊಂಡಿದೆ. ಆದುದರಿಂದ, ಒಂದೆಡೆ ನೆಲ ಮಟ್ಟದಲ್ಲಿ ಉತ್ಪಾದಿಸುವ ಕಾರ್ಮಿಕರ ಸಂಘಟಿತರಾಗುವ ಹಾಗೂ ಚೌಕಾಸಿ ನಡೆಸುವ ಸಾಮರ್ಥ್ಯತೆಯನ್ನು ಬಲಪಡಿಸಲು ಹಾಗೂ ಇನ್ನೊಂದೆಡೆ ಜಾಗತಿಕ ಮಟ್ಟದಲ್ಲಿ ಇತರೆ ಕಾರ್ಮಿಕ ಸಂಘಟನೆಗಳು, ಬಳಕೆದಾರ ರಕ್ಷಣಾ ಸಂಘಟನೆಗಳು ಹಾಗೂ ಮಾನವ ಹಕ್ಕು ರಕ್ಷಣಾ ಸಂಸ್ಥೆಗಳೊಂದಿಗೆ ಸಂಬಂಧವನ್ನು ಬಲಪಡಿಸಲು ಯೂನಿಯನ್ ಶ್ರಮಿಸುತ್ತಿದೆ. ಕಾರ್ಮಿಕ ಪ್ರತಿನಿಧಿಗಳೊಂದಿಗೆ ಗೌರವಯುತವಾದ ಸಾಮೂಹಿಕ ಚೌಕಾಸಿ ನಡೆಸಿದರೆ ಆದರಿಂದ ಆಡಳಿತ ವರ್ಗಕ್ಕೂ ಲಾಭಇದೆ ಎನ್ನುವುದನ್ನು, ಕೆಲವು ಕಂಪನಿಗಳು ಗುರುತಿಸಿದ್ದು, ಲಾಭದಾಯಕ ಫಲಿತಾಂಶ ಒದಗಿಸಿಕೊಟ್ಟಿರುತ್ತದೆ.

ಈ ಸಂಬಂಧವಾಗಿ ಮೆ॥ ಶಾಹಿ ಎಕ್ಸ್ ಪೋರ್ಟ್ ಪ್ರೈ. ಲಿ. ರಲ್ಲಿ ನಡೆದ ಸಾಮೂಹಿಕ ಚೌಕಾಸಿ ಪ್ರಕ್ರಿಯೆಒಂದು ಮಾರ್ಗ ನಿರ್ಣಾಯಕ ಉದಾಹರಣೆಯಾಗಿದೆ. ಆದರೆ, ಕೆಲವು ಕಂಪನಿಗಳು ಸಾಮೂಹಿಕ ಚೌಕಾಸಿ ಪ್ರಕ್ರಿಯೆಯ ಲಾಭ ಸ್ಪಷ್ಟವಾಗಿ ಕಾಣುತ್ತಿದ್ದರೂ ಕಾರ್ಮಿಕರಿಗೆ ಗೌರವಕೊಡಲು ಹಿಂದೇಟು ಹಾಕುವುದಲ್ಲದೇ ಕಾರ್ಮಿಕರಿಗಿರುವ ಸಂಘಟನಾ ಸ್ವಾತಂತ್ರ್ಯವನ್ನು ವಿರೋಧಿಸುತ್ತಿದ್ದಾರೆ. ಈ ಸಂಬಂಧವಾಗಿ ಮೆ॥ ಅರವಿಂದ್ ಲಿಮಿಟೆಡ್‌ರವರು ಉದಾಹರಣೆಯಾಗಿರುತ್ತದೆ.

ಭಾರತದ ಸಂವಿಧಾನ, ಟ್ರೇಡ್ ಯೂನಿಯನ್ ಕಾಯ್ದೆ, ಅಂತರಾಷ್ಟ್ರೀಯ ಕಾನೂನು, ಬ್ರ್ಯಾಂಡ್‌ಗಳ ಕೋಡ್ ಇವೆಲ್ಲವೂ ಸಮರ್ಥಿಸುವ ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿಯ ಹಕ್ಕನ್ನು ಗೌರವಿಸುವಂತೆ ಪ್ರತಿರೋಧಿಸುತ್ತಿರುವ ಕಂಪನಿಗಳನ್ನು ಒಪ್ಪಿಸಲು ಬ್ರ್ಯಾಂಡ್‌ಗಳ ಮೂಲಕ, ನ್ಯಾಯಾಂಗದ ಮೂಲಕ ಕಾರ್ಮಿಕ ಇಲಾಖೆಯ ಮೂಲಕ. ಒತ್ತಡ ಹೇರಲು ಗಾರ್ಮೆಂಟ್ ಕಾರ್ಮಿಕರ ಯೂನಿಯನ್‌ಗಳು ಮಾನವ ಹಕ್ಕಿನ ಸಂಸ್ಥೆಗಳ ಜೊತೆ ಯೂನಿಯನ್ ಸಕ್ರಿಯವಾಗಿ ಸಂಪರ್ಕ ಜಾಲವನ್ನು ನಿರ್ಮಿಸುತ್ತಿದೆ.

ಇಂದು ಕಾರ್ಮಿಕರ ವೇತನ ತೀರ ಕಡಿಮೆ ಇದೆ. ಉತ್ಪಾದನೆಯ ಗುರಿಗಳು ಅಮಾನುಷ್ಯ ಹಂತಕ್ಕೆ ನಿಗದಿಯಾಗುತ್ತಿದೆ. ಕೆಲಸದ ಸ್ಥಳದಲ್ಲಿ ಅಸಭ್ಯ ವರ್ತನೆ ಹಾಗೂ ಹಿಂಸಾತ್ಮಕ ನಡತೆಯನ್ನು ಸರ್ವೆ ಸಾಮಾನ್ಯ ಎಂದು ಪರಿಗಣಿಸಲಾಗುತ್ತಿದೆ. ಪ್ರತೀ ದಿನ ಅವಶ್ಯ ವಸ್ತುಗಳ ಬೆಲೆ ಏರುತ್ತಿದೆ. ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಪಾದಿಸುತ್ತಿದ್ದಾರೆ. ಕಾರ್ಮಿಕರು ಎದುರಿಸುತ್ತಿರುವ ಈ ಸವಾಲುಗಳನ್ನು ನಿವಾರಿಸಲು ಇರುವುದು ಒಂದೇ ದಾರಿ ಅದು ಆಡಳಿತ ವರ್ಗದವರೊಂದಿಗೆ ಸಾಮೂಹಿಕ ಚೌಕಾಸಿ ಹಾಗೂ ಸರ್ಕಾರದೊಂದಿಗೆ ಚೌಕಾಸಿ ನಡೆಸುವುದು.

ನಮಗೆ ಸಾಮೂಹಿಕ ಬಲ ಅವಶ್ಯವಿದೆ. ಎಲ್ಲರಿಗೂ ಉತ್ತಮ ಗುಣಮಟ್ಟದ ಜೀವನವನ್ನು ನಿರ್ಮಿಸಲು ವಿವಿಧ ಭಾಷೆ ಮಾತನಾಡುವ ಹಲವಾರು ಧರ್ಮಗಳನ್ನು ನಂಬುವ, ಶ್ರೀಮಂತ ವಿವಿಧ ಸಂಸ್ಕೃತಿಗಳು, ದೂರ–ದೂರ ಪ್ರದೇಶಗಳಿಂದ ಬಂದಿರುವ ಗಾರ್ಮೆಂಟ್ಸ್ ಕಾರ್ಮಿಕರು ಮುಂದಾಳತ್ವ ವಹಿಸುತ್ತಾರೆ ಎಂದು ನಂಬಿಕೆ ನನ್ನದು.

ಸೆಬಾಸ್ಟಿಯನ್ ದೇವರಾಜ್,
ಗೌರವ ಅಧ್ಯಕ್ಷರು. ಕೂಗು



[redacted]

## ವರದಿ

ದಿನಾಂಕ 04–11–2018 ರಂದು ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ವರದಿಯನ್ನು ಅಂಗೀಕರಿಸಲಾಗಿದೆ. 2016–2018 ರ ಅವಧಿಯಲ್ಲಿ ಕಾರ್ಯಕಾರಿ ಸಮಿತಿಯು 19 ಬಾರಿ ಸಭೆ ಸೇರಿರುತ್ತೆ. ಬಹುಪಾಲು ಸಭೆಗಳಲ್ಲಿ ಉತ್ತಮ ಹಾಜರಾತಿ ಇದ್ದು, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಗಿರುತ್ತದೆ.

- ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ವೇತನ ನೀಡದೇ, ಮುನ್ಸೂಚನೆ ನೀಡದೆ, ಕಾರ್ಖಾನೆಯನ್ನು ದಿಢೀರನೆ ಮುಚ್ಚಿ, ಕಾರ್ಮಿಕರನ್ನು ಮೋಸ ಮಾಡಲು ಪ್ರಯತ್ನಿಸಿದ ಕುರಿತು. – ಅಮ್ಮತಾ ಕ್ರಿಯೇಷನ್; ಟರಕ್ವಾಯಿಸ್ ಅಂಡ್ ಗೋಲ್ಡ್ ಅಪೆರಲ್ಸ್ ಕಾರ್ಖಾನೆ ; ಅವಿಘ್ನ ಫ್ಯಾಷನ್, ಆದ್ಯ ಅಪೆರೇಲ್ಸ್ ಇತ್ಯಾದಿ;
- ಮೈಸೂರು ರಸ್ತೆ, ಪೀಣ್ಯ, ಯಲಹಂಕ, ಮಾಗಡಿರಸ್ತೆ, ಬೊಮ್ಮಸಂದ್ರ ಮತ್ತು ದಾವಣಗೆರೆಯಲ್ಲಿ ಯೂನಿಯನ್ ಚಟುವಟಿಕೆಯನ್ನು ವಿಸ್ತರಿಸುವ ಕುರಿತು.
- ಮೈಸೂರು ರಸ್ತೆಯಲ್ಲಿ ಯೂನಿಯನ್ನಿನ ಶಾಖೆ ಪ್ರಾರಂಭಿಸುವುದರ ಕುರಿತು.
- ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ನೀತಿ ಅಳವಡಿಸುತ್ತಿರುವ ಬಗ್ಗೆ ಹಾಗೂ ಕಾರ್ಮಿಕರ ರಕ್ಷಣೆಗೆ ಇರುವ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿಸಲು ಹೊರಟಿರುವ ಬಗ್ಗೆ.
- ಇ ಎಸ್ ಐ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ, ಅದಕ್ಷತೆ, ಹಾಗೂ ನಿರ್ಲಕ್ಷ್ಯ ಮನೋಭಾವನೆಯ ಕುರಿತು;
- 2016 ರ ಪಿ ಎಫ್ ಐತಿಹಾಸಿಕ ಹೋರಾಟ, ಕಾರ್ಮಿಕರ ಐಕ್ಯ ಬಲದ ಪ್ರದರ್ಶನ ಹಾಗೂ ಅಂತಿಮ ಗೆಲುವಿನ ವಿಶ್ಲೇಷಣೆ;
- ಗಾರ್ಮೆಂಟ್ ಕಾರ್ಮಿಕರಿಗೆ ವೇತನ ತೀರಾ ಕಡಿಮೆ ಇರುವುದರ ಕುರಿತು ಹಾಗು ವೇತನ ಹೆಚ್ಚಳ ಮತ್ತು ಡಿ ಎ (ತುಟ್ಟಿಭತ್ಯೆ) ಹೆಚ್ಚಿಸಿಕೊಳ್ಳುವ ಆವಶ್ಯಕತೆಯ ಬಗ್ಗೆ;
- ಕಾರ್ಖಾನೆಗಳಲ್ಲಿ ಮಹಿಳೆಯರ ಮೇಲಾಗುವ ಹಿಂಸೆ ಮತ್ತು ಲೈಂಗಿಕ ಕಿರುಕುಳದ ಬಗ್ಗೆ.
- ಕುಟುಂಬಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ, ಹಿಂಸೆ, ಸಂಶಯ, ಇತ್ಯಾದಿಯನ್ನು ಅರ್ಥೈಸಿಕೊಳ್ಳುವ ಬಗ್ಗೆ;
- ಮಕ್ಕಳ ಪಾಲನೆ ಮತ್ತು ಪೋಷಣೆಯಲ್ಲಿ ಇರುವ ತೊಂದರೆಗಳ ಕುರಿತು;
- ಮಕ್ಕಳ ಶಿಕ್ಷಣದ ವೆಚ್ಚ ದಿನೇ ದಿನೆ ಏರುತ್ತಿರುವ ಕುರಿತು;
- ಗಾರ್ಮೆಂಟ್ ಉತ್ಪಾದನೆ/ಪೂರೈಕೆಯ ಜಾಗತೀಕ ಸರಪಳಿ – ಗ್ರಾಹಕರು; ಬೈಯರುಗಳು/ಬ್ರಾಂಡ್‌ಗಳು; ಇತರೆ ಮಧ್ಯವರ್ತಿಗಳು; ಕಾರ್ಖಾನೆ ಮಾಲೀಕರು; ಉತ್ಪಾದಿಸುವ ಕಾರ್ಮಿಕರು – ಇದರಲ್ಲಿ, ಕಾರ್ಮಿಕರ ಮಾನವ ಹಕ್ಕುಗಳನ್ನು ಪಾಲಿಸಲು ಇರುವ ದೊಡ್ಡ, ದೊಡ್ಡ ಬ್ರಾಂಡುಗಳ (H&M,GAP,etc) ಜವಾಬ್ದಾರಿಗಳ ಕುರಿತು.
- ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ/ಕಾರ್ಮಿಕ ಹಕ್ಕುಗಳ ಸಂಘಟನೆ/ಗ್ರಾಹಕರ ಸಂಘಟನೆಗಳಾದ ಸಿಎಸ್ಸಿಟಿ (ಫ್ರಾನ್ಸ್), ಸಿಸಿಸಿ (ನೆದರ್ಲ್ಯಾಂಡ್ಸ್), ಡಬ್ಲ್ಯೂ.ಆರ್.ಸಿ(ಯು.ಎಸ್.ಎ), ಸಿ.ಎಲ್.ಬಿ.(ಹಾಂಗ್‌ಕಾಂಗ್) ಇತ್ಯಾದಿ ಇವರೊಂದಿಗೆ ಜೊತೆಗೂಡಿ ಕೆಲಸ ಮಾಡುವುದರ ಕುರಿತು.
- ಕಾರ್ಮಿಕರ ದೂರುಗಳ ವಿಚಾರಣೆಗಳ ಬಗ್ಗೆ (ಬಾಂಬೆ ರೆಯಾನ್;ಅಮ್ಮತ್ ಕ್ರಿಯೇಷನ್;ಅಲ್ಲೂರ್ ಫ್ಯಾಷನ್; ಕೆ. ಮೋಹನ್ ಎಕ್ಸ್‌ಪೋರ್ಟ್ಸ್; ಟರ್‌ಕ್ವಾಯ್ಸ್ ಅಂಡ್ ಗೋಲ್ಡ್ ಅಪಾರೆಲ್ಸ್; ಆದ್ಯಾ ಅಪಾರೆಲ್ಸ್; ಅವಿಘ್ನ ಫ್ಯಾಷನ್ ಇತ್ಯಾದಿ)
- ಕಾರ್ಮಿಕರು ಎದುರಿಸುತ್ತಿರುವ ಸವಾಲುಗಳನ್ನು ನಿವಾರಿಸಲು ಆಡಳಿತ ವರ್ಗದವರೊಂದಿಗೆ ಸಾಮೂಹಿಕ ಚೌಕಾಸಿ ಪ್ರಕ್ರಿಯೆ ನಡೆಸಲು ಕಾರ್ಖಾನೆಗಳಲ್ಲಿ ಕಾರ್ಮಿಕ ಪ್ರತಿನಿಧಿಗಳ ತಂಡಗಳನ್ನು ತಯಾರಿಸುವ ಕುರಿತು;
- ಕೃಷಿ ಕೂಲಿ ಕಾರ್ಮಿಕ ಯೂನಿಯನ್ ನ್ಯಾಯಯುತ ಹೋರಾಟಕ್ಕೆ ಬೆಂಬಲ ನೀಡುವ ಕುರಿತು;
- ನಿವೃತ್ತ ಅಸಂಘಟಿತ ಕಾರ್ಮಿಕರ ಯೂನಿಯನ್‌ಗಳ, ಯೋಗ್ಯ ಪಿಂಚಣಿಗಾಗಿ, ಪರಿಣಾಮಕಾರಿ ಆರೋಗ್ಯ ಸೇವೆಗಾಗಿ ಮತ್ತು ಒಪ್ಪೊತ್ತಿನ ಬಿಸಿ ಊಟದ, ಹೋರಾಟಕ್ಕೆ ಬೆಂಬಲ ನೀಡುವ ಕುರಿತು;
- ಕಾರ್ಮಿಕರಿಗೆ ದೇಶಾದ್ಯಂತ ಏಕರೂಪದ ಸಾಮಾನ್ಯ ಕನಿಷ್ಠ ವೇತನ ರೂ 18000 ನಿಗದಿಯಾಗುವಂತೆ ಹೋರಾಟದಲ್ಲಿ ಭಾಗಿಯಾಗುವುದರ ಬಗ್ಗೆ.
- ರಾಜ್ಯದಲ್ಲಿನ ಭೂಮಿ ಮತ್ತು ವಸತಿ ವಂಚಿತರ ಹೋರಾಟಕ್ಕೆ ಬೆಂಬಲ ನೀಡುವುದರ ಬಗ್ಗೆ.
- ಅಂತರಾಷ್ಟ್ರೀಯ ಕಾರ್ಮಿಕ ದಿನವಾದ, ಮೇ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವುದರ ಕುರಿತು;





- ಅಂತರಾಷ್ಟ್ರೀಯ ದುಡಿಯುವ ಮಹಿಳಾ ದಿನವಾದ ಮಾರ್ಚ್ 8 ರ ಕಾರ್ಯಕ್ರಮ ದ ಕುರಿತು;
- ಜನಪರ ಪತ್ರಕರ್ತೆ ಹಾಗು ಪ್ರಜಾಪ್ರಭುತ್ವ ಮೌಲ್ಯಗಳಿಗಾಗಿ ಹೋರಾಡುತಿದ್ದ ಸಂಗಾತಿ. ಗೌರಿ ಲಂಕೇಶ್ ರವರ ಹತ್ಯೆಯನ್ನು ಖಂಡಿಸಿ ಪ್ರತಿಭಟನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಬಗ್ಗೆ.
- ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿಗೆ ಬೆಂಬಲ;
- ಗಾರ್ಮೆಂಟ್ ಕಾರ್ಮಿಕರಿಗೆ ವಸತಿ ಸೌಕರ್ಯ ಕಲ್ಪಿಸುವಂತೆ ಆಂದೋಲನ ಕೈಗೊಳ್ಳುವ ಬಗ್ಗೆ;
- ಗಾರ್ಮೆಂಟ್ ಕಾರ್ಮಿಕರ ಏಳಿಗೆಗಾಗಿ ಶ್ರಮಿಸುತ್ತಿರುವ ಇತರೆ ಯೂನಿಯನ್‌ಗಳ (ಗಾರ್ಮೆಂಟ್ ಲೇಬರ್ ಯೂನಿಯನ್ ಮತ್ತು ಏಷಿಯ ಫ್ಲೋರ್ ವೇಜ್ ಅಲೈಯನ್ಸ್) ಜೊತೆ ಜಂಟಿಯಾಗಿ ಕೆಲಸ ಮಾಡುವುದರ ಕುರಿತು;
- ಸದಸ್ಯತ್ವ ಹೆಚ್ಚಿಸಿಕೊಳ್ಳುವ ಕುರಿತು;
- ಲೆಕ್ಕ ಪತ್ರ ಮಂಡನೆ.

## ಯೂನಿಯನ್ನಿನ ಸಂಘಟನಾ ಕೆಲಸ:

ಯೂನಿಯನ್ ಬಲಪಡಿಸುವ ನಿಟ್ಟಿನಲ್ಲಿ ಕಾರ್ಮಿಕರನ್ನು ಅವರ ಮನೆಗಳಲ್ಲಿ, ಕಾರ್ಖಾನೆ ಗೇಟ್‌ಗಳ ಹೊರಗೆ, ವಾಸದ ಏರಿಯಾಗಳಲ್ಲಿ, ಯೂನಿಯನ್ ಕಛೇರಿಗಳಲ್ಲಿ ಭೇಟಿ ಮಾಡಿ ಅವರು ಎದುರಿಸುತ್ತಿರುವ ಸವಾಲುಗಳ ಬಗ್ಗೆ, ಅವರ ಜೀವನದ ಬಗ್ಗೆ ಅವರ ಕನಸುಗಳ ಬಗ್ಗೆ ಅವರ ನೋವು ನಲಿವುಗಳ ಬಗ್ಗೆ ಚರ್ಚೆ ಮಾಡಲಾಗಿರುತ್ತದೆ. ಸಾವಿರಾರು ಪ್ಯಾಂಫ್ಲೆಟ್ ಹಂಚುವ ಮುಖಾಂತರ ಕಾರ್ಮಿಕರಿಗೆ ಕಾನೂನು/ಹಕ್ಕುಗಳ ಅರಿವು ಮೂಡಿಸಲು ಪ್ರಯತ್ನಿಸಲಾಗಿದೆ. ಹಲವು ವಾಟ್ಸಾಪ್ ಗುಂಪುಗಳನ್ನು ಮಾಡಿ ಕಾರ್ಮಿಕರ ಸಂಪರ್ಕ ಇರಿಸಿಕೊಳ್ಳಲಾಗಿದೆ.

ಈ ಪ್ರಕ್ರಿಯೆಯ ಮೂಲಕ ಹಲವು ನಿರ್ದಿಷ್ಟ ಕಾರ್ಖಾನೆಗಳ ಆಸಕ್ತಿಯುಳ್ಳ ಕಾರ್ಮಿಕ ಸಮಿತಿಗಳು ರಚಿಸಲಾಗಿದೆ. ಬೆಂಗಳೂರಿನ ಬೊಮ್ಮನಹಳ್ಳಿ, ಬೊಮ್ಮಸಂದ್ರ, ಮೈಸೂರು ರಸ್ತೆ, ಮಾಗಡಿ ರಸ್ತೆ, ಪೀಣ್ಯ, ಯಲಹಂಕದಲ್ಲಿ 8 ವಿವಿಧ ಕಾರ್ಖಾನೆಗಳ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

ಅಲ್ಲದೆ, ಕಾರ್ಮಿಕರ ವಾಸದ ಸ್ಥಳಗಳಲ್ಲಿಯೂ ವಿವಿಧ ಕಾರ್ಖಾನೆಗಳ ಕಾರ್ಮಿಕರನ್ನು ಒಟ್ಟುಗೂಡಿಸಿ, ಸಮಿತಿಗಳನ್ನು ಹೊಂಗಸಂದ್ರ, ಆರ್ ಆರ್ ನಗರ, ಕೆಂಚನಹಳ್ಳಿ, ಮುತ್ತಾರಾಯನಗರ, ರಾಮೋಹಳ್ಳಿ, ಹೆಗ್ಗನಹಳ್ಳಿ, ಲಗ್ಗೆರೆ, ನೆಲಗದರನಹಳ್ಳಿ, ಗೊರಗುಂಟೆ ಪಾಳ್ಯ, ಅಗ್ರಹಾರ ಲೇಔಟ್ ಗಳಲ್ಲಿ ರಚಿಸಲಾಗಿರುತ್ತದೆ. ಈ ಸಮಿತಿಗಳು, ಪ್ರತಿ ತಿಂಗಳು ಸಭೆಗಳನ್ನು ನಡೆಸಿ, ಕಾರ್ಮಿಕರ ಬದುಕಿನ ಪರಿಸ್ಥಿತಿ ಕುರಿತು, ವೇತನದ ಕೊರತೆ; ಕಾರ್ಖಾನೆಯಲ್ಲಿ ಕಾನೂನು ಉಲ್ಲಂಘನೆ,ಅವರ ಮೇಲೆ ನಡೆಯುವ ಲೈಂಗಿಕ ಕಿರುಕುಳ, ಹಿಂಸೆ, ಅಸಭ್ಯ ವರ್ತನೆ ಬಗ್ಗೆ, ಪಿ ಎಫ್, ಇ ಎಸ್ ಐ, ಬೋನಸ್, ರಜೆ ನಿರಾಕರಣೆ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಇತ್ಯಾದಿ ಕುರಿತು ಚರ್ಚಿಸಲಾಗಿರುತ್ತದೆ.

## ಫ್ಯಾಕ್ಟರಿ ಗೇಟ್ ಮುಂದೆ ಕಿರು ಸಭೆಗಳು:

ಒಂದೆಡೆ, ಕೆಲಸದ ಒತ್ತಡ (ಓಟಿ/ಓಸಿ) ಮೊತ್ತೊಂದೆಡೆ ಮನೆಯ ಸಂಪೂರ್ಣ ಜವಾಬ್ದಾರಿ ಹೊಂದಿರುವುದರಿಂದ, (ಬಹುತೇಕ ಮಹಿಳಾ ಕಾರ್ಮಿಕರಿಗೆ ಮನೆ ಕೆಲಸದಲ್ಲಿ ತನ್ನ ಪುರುಷನ ಸಹಾಯ ಸಿಗದೇ ಇದ್ದು) ಮಹಿಳಾ ಕಾರ್ಮಿಕರು ಕಾರ್ಖಾನೆಯ ಮುಂದೆ ಸ್ವಲ್ಪ ಸಮಯಕ್ಕೆ ಸಿಕ್ಕುತ್ತಾರೆ. ಈ ಅಲ್ಪ ಸಮಯದಲ್ಲಿ, ಯೂನಿಯನ್ ಪದಾಧಿಕಾರಿಗಳು ಹಾಗೂ ಯೂನಿಯನ್ನಿನ ಕಾರ್ಮಿಕ ಪ್ರತಿನಿಧಿಗಳು ನಿರಂತರವಾಗಿ ಅವರನ್ನು ಸಂಪರ್ಕಿಸಿ ಸಾವಿರಾರು ಕರಪತ್ರಗಳನ್ನು ಹಂಚುತ್ತಾರೆ. ಈ ಸಂದರ್ಭದಲ್ಲಿ, ಕಾರ್ಮಿಕರು ಸಾಧಾರಣವಾಗಿ ಹಂಚಿಕೊಂಡಿರುವುದು – ಉತ್ಪಾದನೆಯ ಒತ್ತಡ, ಲೈಂಗಿಕ ಕಿರುಕುಳ, ಮಾನಸಿಕ ಮತ್ತು ದೈಹಿಕ ಹಿಂಸೆಗಳು, ಅಸಭ್ಯ ವರ್ತನೆ, ಪಿ ಎಫ್, ಇ ಎಸ್ ಐ, ಬೋನಸ್ ಉಲ್ಲಂಘನೆ, ರಜೆ ನೀಡದಿರುವುದು, ವಲಸೆ ಕಾರ್ಮಿಕರ ಹಿಂಸಾತ್ಮಕ ಪರಿಸ್ಥಿತಿಗಳು ಇತ್ಯಾದಿ.



[redacted]

ಯೂನಿಯನ್ ವತಿಯಿಂದ ಈ ಕಾರ್ಮಿಕ ಬಾಂಧವರಿಗೆ ಕಾನೂನು ಅರಿವು ಮೂಡಿಸಿ, ಧೈರ್ಯ ತುಂಬಿ, ಸಂಘಟಿತರಾಗಿ, ಸಾಮೂಹಿಕ ಚೌಕಾಸಿಯ ಮೂಲಕ ಇವೆಲ್ಲವನ್ನು ಪರಿಹರಿಸಬಹುದೆಂಬ ನಂಬಿಕೆ ತರಲು ಪ್ರಯತ್ನಿಸಲಾಗಿದೆ. ಇದನ್ನು ಕೇಳಿದ ಹಲವಾರು ಕಾರ್ಮಿಕರು, ಆಸಕ್ತಿಯಿಂದ, ನಂತರ ಸ್ವಯಿಚ್ಛೆಯಿಂದ ಯೂನಿಯನ್ ಕಛೇರಿಗೆ ಬಂದು ಸದಸ್ಯತ್ವ ಪಡೆದಿರುವುದರಿಂದ, ನಮಗೆ ಸ್ಪೂರ್ತಿ ತಂದಿದೆ.

**ಅನ್ಯಾಯ, ಕಾರ್ಮಿಕ ವಿರೋಧಿ ನೀತಿ, ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಯೂನಿಯನ್ನಿನ ಮಧ್ಯಸ್ಥಿಕೆ:**

ಅನ್ಯಾಯ, ಕಾರ್ಮಿಕ ವಿರೋಧಿ ನೀತಿ, ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಯೂನಿಯನ್ನಿನ ಮಧ್ಯಸ್ಥಿಕೆ: ಯಾವುದೇ ಅನ್ಯಾಯದ, ಕಾರ್ಮಿಕ ವಿರೋಧಿ ಪರಿಹಾರಕ್ಕೆ ಮಾತುಕತೆಯೆ ಮೊದಲ ವಿಧಾನ ಎಂಬ ನಂಬಿಕೆಯಿಂದ, ಯಾವುದೇ ಅನ್ಯಾಯದ, ಕಾರ್ಮಿಕ ವಿರೋಧಿ ನೀತಿಯ, ಕಾನೂನು ಉಲ್ಲಂಘನೆಯ ಪ್ರಕರಣಗಳ ಬಗ್ಗೆ ಕಾರ್ಮಿಕರು ಯೂನಿಯನ್ ಪ್ರತಿನಿಧಿಗಳ ಗಮನಕ್ಕೆ ತಂದ ತಕ್ಷಣ, ಆ ವಿಷಯದ ಕುರಿತು ಸ್ಪಷ್ಟ ಮಾಹಿತಿ ಸಂಗ್ರಹಿಸಿ, ಆಡಳಿತ ವರ್ಗದವರೊಂದಿಗೆ ಮಾತನಾಡಲು ಸಮಯಾವಕಾಶ ಕೋರಿ ಸಮಸ್ಯೆಯನ್ನು ನಿವಾರಿಸಲು/ಇತ್ಯರ್ಥಿಸಲು ಪ್ರಯತ್ನಿಸಲಾಗಿದೆ. ಬಹುತೇಕ ಕಾರ್ಖಾನೆಗಳಲ್ಲಿ ಇದು ಯಶಸ್ಸು ತಂದಿದೆ. ಕೆಲವು ಆಡಳಿತದವರು ತಪ್ಪಾಗಿದ್ದರೂ, ಆ ತಪ್ಪುಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸುವುದರಿಂದ, ಮಾತುಕತೆಯನ್ನು ನಿರಾಕರಿಸುತ್ತಾರೆ. ಈ ಪರಿಸ್ಥಿತಿಯಲ್ಲಿ, ಯೂನಿಯನ್ ಅನಿವಾರ್ಯವಾಗಿ ಇತರೆ ಮಾರ್ಗಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ.

**ಈ ಅವಧಿಯಲ್ಲಿ ಟೇಕ್ಸ್ ಪೋರ್ಟ್, ಟರಕ್ವಾಯಿಸ್ ಅಂಡ್ ಗೋಲ್ಡ್ ಅಪೆರಲ್ಸ್, ಅವಿಘ್ನ ಪ್ಯಾಷನ್, ಆಧ್ಯ ಅಪೆರೇಲ್ಸ್, ಶಾಹಿ 46, 8, 35, ತಾರಾಜ್ ಅಪೆರೇಲ್ಸ್, ನ್ಯೂ ಕ್ರಾಫ್ಟ್, ಡೆನಿಮ್, ನೀಶಾ ಎಕ್ಸ್‌ಪೋರ್ಟ್, ಬಿ ಆರ್ ಎಫ್ ಎಲ್ ಕಾರ್ಖಾನೆಗಳಲ್ಲಿ ಕೆಲವು ಪ್ರಮುಖ ಮಧ್ಯಪ್ರವೇಶಗಳಾಗಿವೆ.**

**<u>ಕಾರ್ಮಿಕರಲ್ಲಿ ನಾಯಕತ್ವ ಗುಣಗಳನ್ನು ಮುಂದೆ ತಂದು ಯೂನಿಯನ್ ಬಲಪಡಿಸಿದ ಹೋರಾಟದ ಅನುಭವಗಳು:</u>**

**❖ ಟರಕ್ವಾಯಿಸ್ ಅಂಡ್ ಗೋಲ್ಡ್ ಅಪೆರಲ್ ಕಾರ್ಖಾನೆ:**

ನಂ.507–26/ಎ. 8ನೇ ಮುಖ್ಯರಸ್ತೆ, ಅಗ್ರಹಾರ ಲೇಔಟ್, ಯಲಹಂಕ, ಬೆಂಗಳೂರು–560063. ಈ ವಿಳಾಸದಲ್ಲಿ ಇರುವ ಟರಕ್ವಾಯಿಸ್ ಅಂಡ್ ಗೋಲ್ಡ್ ಅಪೆರಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡಿರುವ 300 ಜನ ಕಾರ್ಮಿಕರಿಗೆ ಆಡಳಿತ ವರ್ಗ ಹಲವು ತಿಂಗಳುಗಳ ಕಾಲ ಸಂಬಳ ವಿಳಂಬವಾಗಿ ನೀಡುತಿತ್ತು. ಕಾರ್ಮಿಕರು ಸಹನೆಯಿಂದ ವಿಳಂಬವನ್ನು ಒಪ್ಪಿಕೊಂಡು ಕೆಲಸ ಮಾಡುತಿದ್ದರು. ಕೊನೆಗೂ, ಆಡಳಿತ ವರ್ಗ ಕಾರ್ಮಿಕರಿಗೆ ವೇತನ, ಬೋನಸ್, ಸೆಟಲ್‌ಮೆಂಟ್ ಮತ್ತು ಪಿ.ಎಫ್ ನೀಡದೆ ಕಾರ್ಖಾನೆಯನ್ನು ಮುಚ್ಚಲು ಪ್ರಯತ್ನಿಸಿದಾಗ ಕಾರ್ಮಿಕರು ಕಾರ್ಖಾನೆಯ ಮುಂದೆ ಪ್ರತಿಭಟನೆ ಪ್ರಾರಂಭಿಸಿ, ಯೂನಿಯನ್ ಸಹಾಯ ಕೋರಿದರು. ಸ್ಥಳೀಯ ಚುನಾಯಿತ ಮುಖಂಡರು ಮತ್ತು ಸ್ಥಳೀಯ ಪೋಲೀಸ್ ಸಿಬ್ಬಂಧಿ ಆಡಳಿತ ಮಂಡಳಿಯ ಪರವಾಗಿ ಶಿಫಾರಸ್ಸು ಮಾಡಲು ಬಂದರು. ಕಾರ್ಮಿಕರು ಇದನ್ನು ತಿರಸ್ಕರಿಸಿದರು. ಕಾರ್ಮಿಕರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ, ಯೂನಿಯನ್ ಪದಾಧಿಕಾರಿಗಳೊಂದಿಗೆ ಕೈ ಜೋಡಿಸಿ ಆಡಳಿತ ಮಂಡಳಿಯ ಜೊತೆ ಹಲವಾರು ಸುತ್ತಿನ ಮಾತುಕತೆ ನಡೆಸಿದರು. ಇದರ ಪರಿಣಾಮವಾಗಿ, ಕಾರ್ಮಿರಿಗೆ ಬರಬೇಕಾಗಿರುವ ವೇತನ ಸುಮಾರು ರೂ 12 ಲಕ್ಷ, ರಜೆ ವೇತನ ಮತ್ತು ಗ್ರಾಚ್ಯುಟಿ ಸೇರಿ ಸುಮಾರು ರೂ 9ಲಕ್ಷ ಪಡೆಯಲು ಯಶಸ್ಸು ಹಾಗೂ ಪಿ. ಎಫ್ ಹಣ ಸುಮಾರು 3,87,29 538 ರೂಗಳು ಇಲಾಖೆಗೆ ಕಟ್ಟಲಾಯಿತು. ಈ ಹೋರಾಟ 25 ಮೇ 2017 ರಿಂದ ಡಿಸೆಂಬರ್ 2017 ವರಿಗೆ ನಡೆಯಿತು. ಬೋನಸ್ ಮತ್ತು ಕಾರ್ಖಾನೆ ಮುಚ್ಚಿರುವುದಕ್ಕೆ ಪರಿಹಾರದ ಸಂಬಂಧವಾಗಿ ಕಾರ್ಮಿಕ ಇಲಾಖೆಯಲ್ಲಿ ರಾಜಿ ಸಂಧಾನ ಪ್ರಕ್ರಿಯೆ ಮುಂದುವರಿಯುತ್ತಿದೆ. ಈ ಹೋರಾಟದಲ್ಲಿ ಹಲವಾರು ಕಾರ್ಮಿಕರು ತಮ್ಮ ನಾಯಕತ್ವ ಗುಣಗಳನ್ನು ಪ್ರದರ್ಶಿಸಿರುತ್ತಾರೆ.



ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ KOOGU ]
ಸರ್ವಸದಸ್ಯರ ಸಭೆ 16.12.2018 – 2016–18ರ ವರದಿ

**❖ ಅವಿಘ್ನ ಪ್ಯಾಷನ್ ಕಾರ್ಖಾನೆ:**

ನಂ 1/3, ಹೆಗ್ಗನಹಳ್ಳಿ ಮುಖ್ಯರಸ್ತೆ, ನೀಲಗಿರಿತೋಪು ಬಸ್ ಸ್ಟಾಪ್ ಹತ್ತಿರ, ವಿಶ್ವನೀಡಂ ಅಂಚೆ, ಬೆಂಗಳೂರು 91. ಈ ವಿಳಾಸದಲ್ಲಿ ಅವಿಘ್ನ ಪ್ಯಾಷನ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ 150 ಜನ ಕಾರ್ಮಿಕರಿಗೆ ವೇತನ, ಭವಿಷ್ಯ ನಿಧಿ, ಮತ್ತು ಆರೋಗ್ಯ ವಿಮೆ ನೀಡದೆ ದಿಢೀರನೆ ಕಾರ್ಖಾನೆ ಮುಚ್ಚಿ ಬೀದಿಪಾಲು ಮಾಡಿರುವ ಮಾಲೀಕರ ವಿರುದ್ಧ ಕಾರ್ಖಾನೆಯ ಮುಂದೆ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಮಾಲೀಕ ತಲೆತಪ್ಪಿಸಿಕೊಂಡಿದ್ದ ಕಾರಣ, ಪೋಲೀಸ್ ಸಿಬ್ಬಂಧಿ ಕಾರ್ಮಿಕರನ್ನು ಚದರಿಸಲು ಪ್ರಯತ್ನಿಸಿದರು. ಯೂನಿಯನ್ ಸಹಾಯದಿಂದ, ಕಾರ್ಮಿಕರು ತಕ್ಷಣ, ಕಾರ್ಮಿಕ ಇಲಾಖೆ, ಪಿ ಎಫ್ ಇಲಾಖೆ, ಇಎಸ್‌ಐ ಇಲಾಖೆಗಳಿಗೆ ದೂರು ನೀಡಿದ ತರುವಾಯ, ಪೋಲೀಸ್ ಇಲಾಖೆಯವರು ಹೋರಾಟಕ್ಕೆ ಸ್ಪಂದಿಸಿದರು. ಕಾರ್ಮಿಕ ಇಲಾಖೆಯ ಮದ್ಯಸ್ಥಿಕೆಯಿಂದ ನಿರಂತರವಾಗಿ ರಾಜಿ ಸಂಧಾನ ಸಭೆಗಳ ಪ್ರಕ್ರಿಯೆಗಳಿಂದ ಕಾರ್ಮಿಕರಿಗೆ 1 ತಿಂಗಳ ಸಂಬಳ ಸುಮಾರು ರೂ 4.5 ಲಕ್ಷಗಳ ಮೊತ್ತದಷ್ಟು ಕೊಡಿಸಲು ಸಾಧ್ಯವಾಯಿತು. ಮಾಲೀಕರು ಪರ್ಯಾಯ ಕೆಲಸವನ್ನು ದೂರವಿರುವ ಮೂಡಲಪಾಳ್ಯದಲ್ಲಿ ನೀಡುವುದಾಗಿ ಸೂಚಿಸಿದರು. ಕಾರ್ಮಿಕರು ಚರ್ಚಿಸಿ, ಬಾಕಿ ಬರಬೇಕಾದ ಸಂಬಳ, ಬೋನಸ್, ನೀಡಿ, ಸಾರಿಗೆ ವ್ಯವಸ್ಥೆ ಮಾಡಿದರೆ ಕೆಲಸಕ್ಕೆ ಬರುವುದಾಗಿ ಪ್ರಸ್ತಾಪಿಸಿದರು. ಮುಂದಿನ ರಾಜಿ ಸಂಧಾನ ಸಭೆಗಳಿಗೆ ಮಾಲೀಕರು ಗೈರು ಹಾಜರಿಯಾದರು. ಈ ಪ್ರಕರಣ ಈಗ ನ್ಯಾಯ ತಿರ್ಮಾನ ಮಾಡಲು ಸರ್ಕಾರಕ್ಕೆ ಮತ್ತು ಕಾರ್ಮಿಕ ನ್ಯಾಯಾಲಯಕ್ಕೆ ರವಾನಿಸಲಾಗಿದೆ.ಬಈ ಹೋರಾಟದಲ್ಲಿ, ಕಾರ್ಮಿಕರೆ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ.

**❖ ಆಧ್ಯ ಅಪೆರೇಲ್ಸ್ ಕಾರ್ಖಾನೆ:**

ನಂ 367, ತಿರಮೇನಹಳ್ಳಿ ಗ್ರಾಮ, ಜಕ್ಕೂರು ಅಂಚೆ, ಯಲಹಂಕ, ಬೆಂಗಳೂರು 560064 ಈ ವಿಳಾಸದಲ್ಲಿ ಇರುವ ಆಧ್ಯ ಅಪೆರೇಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ 150 ಜನ ಕಾರ್ಮಿಕರಿಗೆ ಮೂರು ತಿಂಗಳ ಸಂಬಳ ಕೊಡದೆ ಇದ್ದ ಕಾರಣ 13.12.2017 ರಂದು ಕಾರ್ಮಿಕರು ಆಡಳಿತ ಮಂಡಳಿಯವರ ಬಳಿ ಸಂಬಳ ಕೇಳಲು ಹೋದರು. ಆಡಳಿತ ಮಂಡಳಿಯವರಿಂದ ಯಾವುದೇ ಸಮರ್ಪಕ ಉತ್ತರ ಸಿಗದೆ ಇದ್ದಾಗ, ಕಾರ್ಮಿಕರು ಆಕ್ರೋಶದಿಂದ ಪ್ರತಿಕ್ರಿಯಿಸಿದರು. ಆಡಳಿತ ಮಂಡಳಿಯವರ ವಿರುದ್ಧ ಸಂಪಿಗೆಹಳ್ಳಿ ಪೋಲಿಸ್ ಠಾಣೆಗೆ ದೂರು ನೀಡಿದರು. ಆದರೆ, ಪೋಲಿಸ್ ರವರು ಮಾಲೀಕರ ಪರವಾಗಿ ಅನುಕಂಪ ತೋರಿದರು ವಿನ: ಕಾರ್ಮಿಕರಿಗೆ ಮೂರು ತಿಂಗಳ ಸಂಬಳ ನೀಡದಿರುವ ಬಗ್ಗೆ ಹೆಚ್ಚಿಗೆ ತೂಕ ಕೊಡಲಿಲ್ಲ. ಈ ಕಾರ್ಮಿಕರು ಈ ಮೊದಲು ಟರಕ್ವಾಯಿಸ್ ಅಂಡ್ ಗೋಲ್ಡ್ ಅಪೆರೇಲ್ಸ್ ಕಾರ್ಖಾನೆಯ ಹೋರಾಟದಲ್ಲಿ ತೊಡಗಿಸಿಕೊಂಡು ಬರಬೇಕಾಗಿರುವ ಸೌಲಭ್ಯಗಳು ಪಡೆದ ಅನುಭವ ಇದ್ದ ಕಾರ್ಮಿಕರು. ಕಾರ್ಮಿಕರು ಹೋರಾಟವನ್ನು ಮುಂದುವರಿಸಿದರು. ಹೋರಾಟವನ್ನು ನಿಲ್ಲಿಸಲು, ಮಾಲೀಕರ ಪರವಾಗಿ ಸ್ಥಳೀಯ ಚುನಾಯಿತ ಮುಖಂಡರು ಮತ್ತು ಕೆಲವು ಸಂಘಟನೆಗಳ ಮುಖಂಡರು ಮಧ್ಯಸ್ಥಿಗೆ ವಹಿಸಿದರು. ಆಗ ಅನ್ಯಮಾರ್ಗವಿಲ್ಲದೆ ಕಾರ್ಮಿಕ ಇಲಾಖೆಯಲ್ಲಿ ಹಾಗೂ ಪಿ ಎಫ್ ಇಲಾಖೆಗೆ ದೂರು ದಾಖಲೆ ಮಾಡಲಾಯಿತು. ಈ ಕಾರ್ಮಿಕರು, ಮೊದಲ ಹೋರಾಟದ ಅನುಭವದಿಂದ ಯೂನಿಯನ್ ಪ್ರಕ್ರಿಯೆಯಲ್ಲಿ ನಂಬಿ ಹೋರಾಟವನ್ನು ಮುಂದುವರಿಸುತ್ತಿದ್ದಾರೆ.

**❖ ಶಾಹಿ ಎಕ್ಸ್‌ಪೋರ್ಟ್ ಲಿ ಘಟಕ 8**

ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ, ಶಾಹಿ ಘಟಕ 8 ರಲ್ಲಿ ಸುಮಾರು 3000 ಕಾರ್ಮಿಕರು ಶ್ರಮಿಸುತ್ತಿದ್ದಾರೆ. ಈ ಕಾರ್ಖಾನೆಯಲ್ಲಿ ಬಹಳ ವರ್ಷಗಳಿಂದ ಕಾರ್ಮಿಕರು, ಅದರಲ್ಲೂ ಮಹಿಳಾ ಕಾರ್ಮಿಕರು, ಸೂಪರ್ವೈಜರಗಳ, ಹೆಚ್.ಆರ್ ಸಿಬ್ಬಂಧಿಗಳ ಹಾಗು ಪ್ರೊಡಕ್ಷನ್ ಮ್ಯಾನೆಜರುಗಳ ಅಸಭ್ಯ ಹಾಗೂ ಕ್ರೂರ ವರ್ತನೆಯ ಬಗ್ಗೆ ಮೌಖಿಕವಾಗಿ ತಿಳಿಸುತ್ತಿದ್ದರು. ಆದರೆ ಯೂನಿಯನ್ ಮಧ್ಯಪ್ರವೇಶ ಮಾಡಿ ದೂರು ನೀಡದವರ್ಯಾರು ಎಂದು ಗೊತ್ತಾದರೆ, ಇನ್ನು ಹೆಚ್ಚು ಹಿಂಸೆಗೆ ಒಳಗಾಗಬಹುದೆಂಬ ಭಯದಿಂದ ಯಾರು ಮುಂದೆ ಬರುತ್ತಿರಲಿಲ್ಲ. ಕಳೆದ 2 ವರ್ಷದಿಂದ, ಕಾರ್ಖಾನೆಯಲ್ಲಿ ತೀರಾ ಕೊಳಕು ನೀರು ಸರಬರಾಜು ಆಗುತಿತ್ತು. ಮೇಲು ಅಧಿಕಾರಿಗಳು ಮತ್ತು ಕೆಲವು ಸಿಬ್ಬಂಧಿಗಳು ಬಾಟಲ್ ನೀರು ತರಿಸಿಕೊಳ್ಳುತ್ತಿದ್ದರು. ಇದರ ಜೊತೆ ಸಾರಿಗೆ ವ್ಯವಸ್ಥೆಯಲ್ಲಿ ಓವರ್ಲೋಡಿಂಗ್, ಮನಸೋಯಿಚ್ಚೆ ನಿಲುಗಡೆಗಳು ಇತ್ಯಾದಿ ಅವ್ಯವಸ್ಥೆಯಿಂದ ಕೂಡಿತ್ತು. ಇದಲ್ಲದೆ, ಸಂಬಳ ತೀರ ಕಡಿಮೆಯಾಗಿತ್ತು. ಕಾರ್ಖಾನೆಯಲ್ಲಿರುವ ಯಾವ ಕಮಿಟಿಗಳೂ ಕೆಲಸ ಮಾಡುತಿರಲಿಲ್ಲ.



[redacted]

ಕಾರ್ಖಾನೆಯ ಕಾರ್ಮಿಕರೊಂದಿಗೆ ಹತ್ತಾರು ಚರ್ಚೆಗಳನ್ನು ಇವೆಲ್ಲವನ್ನು ಸುಧಾರಿಸುವುದು ಹೇಗೆ ಎಂಬುವುದರ ಬಗ್ಗೆ ಕಾರ್ಖಾನೆಯ ಕಾರ್ಮಿಕರೊಂದಿಗೆ ಹತ್ತಾರು ಚರ್ಚೆಗಳನ್ನು ನಡೆಸಲಾಯಿತು. 2017 ರಲ್ಲಿ ಯೂನಿಯನ್ ಒಂದು ದೃಢವಾದ ನಂಬಿಕೆಗೆ ಬಂದಿತು. ಕಾರ್ಮಿಕರು ಕಾರ್ಖಾನೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಸುಧಾರಿಸಿದರೆ, ಕಾರ್ಮಿಕರಿಗೂ ಮತ್ತು ಆಡಳಿತ ವರ್ಗದವರಿಗೆ ಇಬ್ಬರಿಗೂ ಲಾಭ ಇರುವುದರಿಂದ, ಪರಸ್ಪರ ಮಾತುಕತೆ ಇದಕ್ಕೆ ಸೂಕ್ತ ದಾರಿ ಎಂದು. ಈ ನಂಬಿಕೆಯಿಂದ ದಿನಾಂಕ 21.01.2018 ರಂದು ಕಾರ್ಖಾನೆಯ ಕಾರ್ಮಿಕ-ಸದಸ್ಯರ ಸರ್ವಸದಸ್ಯರ ಸಭೆಯಲ್ಲಿ ಕಾರ್ಖಾನೆಯ 12 ಕಾರ್ಮಿಕ ಪ್ರತಿನಿಧಿಗಳನ್ನು ಚುನಾಯಿಸಲಾಯಿತು. ಈ ಸರ್ವಸದಸ್ಯರ ಸಭೆಯಲ್ಲಿ ಸುಧೀರ್ಘ ಚರ್ಚೆಯ ನಂತರ ಸಾಮೂಹಿಕ ಚೌಕಾಸಿಗೆ ಕೆಳಕಂಡ 3 ಮುಖ್ಯ ಮತ್ತು ತುರ್ತು ಬೇಡಿಕೆಗಳನ್ನು ಆಡಳಿತ ಮಂಡಳಿಯ ಮುಂದಿಡಲು ನಿರ್ಧರಿಸಲಾಯಿತು:

1. ಕಾರ್ಖಾನೆಯಲ್ಲಿರುವ ನೀರು ಕುಡಿದು ಹಲವಾರು ಕಾರ್ಮಿಕರಿಗೆ ಹೊಟ್ಟೆ ನೋವು, ಜ್ವರ, ವಾಂತಿ ಬೇದಿ ಚರ್ಮದ ರೋಗ, ಮುಂತಾದ ಅನಾರೋಗ್ಯಕ್ಕೆ ಕಾರ್ಮಿಕರು ತುತ್ತಾಗುತ್ತಿರುವುದರಿಂದ, ನೀರಿನ ಗುಣಮಟ್ಟವನ್ನು ಸುಧಾರಿಸಲು ಮಾತುಕತೆ ಮಾಡುವುದು.
2. ಕಾರ್ಮಿಕರು ಬರುವ ಹಳ್ಳಿಗಳು, ಕಾಡು ಪ್ರದೇಶವಾಗಿದ್ದು ಅಲ್ಲಿ ಕರಡಿಗಳು ಚಿರತೆಗಳು ಮತ್ತು ಆನೆಗಳು ಇರುವ ಪ್ರದೇಶವಾಗಿದ್ದು, ಕಾರ್ಖಾನೆಯಿಂದ ವ್ಯವಸ್ಥೆ ಮಾಡಿರುವ ಸಾರಿಗೆಯ ಚಾಲಕರು, ಮನಸೋಯಿಚ್ಛೆ ವಾಹನಗಳನ್ನು ಮಧ್ಯ ದಾರಿಯಲ್ಲಿ ನಿಲ್ಲಿಸಿ, ಕಾರ್ಮಿಕರನ್ನು ಬಿಟ್ಟು ಹೋಗುತ್ತಿದ್ದ ಕಾರಣ ಕಾರ್ಮಿಕರು ಇದನ್ನು ಪ್ರಶ್ನಿಸಿದಾಗ, ಚಾಲಕರು ಕಾರ್ಮಿಕರ ಜೊತೆ ಅಸಭ್ಯವಾಗಿ ವರ್ತಿಸುತ್ತಿದ್ದರು. ಸಾರಿಗೆ ವ್ಯವಸ್ಥೆ ಸುಧಾರಣೆ ಮತ್ತು ಚಾಲಕರು ಮತ್ತು ಕಾರ್ಮಿಕರ ನಡುವೆ ಗೌರವದ ವರ್ತನೆ ತರುವ ಸಂಬಂಧವಾಗಿ ಸಾಮೂಹಿಕ ಚೌಕಾಸಿ ಪ್ರಕ್ರಿಯೆಯಲ್ಲಿ ಪರಿಹಾರ ಕಂಡುಕೊಳ್ಳುವುದು.
3. ಕಾರ್ಖಾನೆಯಲ್ಲಿ ಉತ್ಪಾದನೆ ಗುರಿ ದಿನೇ ದಿನೇ ಹೆಚ್ಚಾಗುತಿದ್ದು, ಅಗತ್ಯ ಸೇವೆಗಳ/ವಸ್ತುಗಳ (ಮಕ್ಕಳ ಶಿಕ್ಷಣ, ಆರೋಗ್ಯ, ಮನೆ ಬಾಡಿಗೆ ಆಹಾರ ) ಬೆಲೆ ಏರುತ್ತಿದ್ದರೂ ಸಂಬಳದಲ್ಲಿ ಏರಿಕೆಯೆ ಇಲ್ಲದಿರುವ ಬಗ್ಗೆ ಚರ್ಚಿಸಿ, ಎಲ್ಲಾ ಕಾರ್ಮಿಕರಿಗೂ ಸಂಬಳದಲ್ಲಿ ಕನಿಷ್ಠ ರೂ 3000 ಹೆಚ್ಚಳ ಮಾಡುವುದರ ಕುರಿತು ಚರ್ಚೆ ನಡೆಸುವುದು.

ಈ ಮೇಲಿನ ನಿರ್ಧಾರವನ್ನು ಕಾರ್ಖಾನೆಯ ಇತರ ಕಾರ್ಮಿಕರೊಂದಿಗೆ ಮೂರು ತಿಂಗಳ ಕಾಲ ಚರ್ಚಿಸಿದ ನಂತರ, ಬೇಡಿಕೆ ಪ್ರಸ್ತಾವನಕ್ಕೆ 700ಕ್ಕೂ ಹೆಚ್ಚು ಕಾರ್ಮಿಕರು ಒಪ್ಪಿಗೆ ಸಹಿ ಮಾಡಿದರು. ದಿನಾಂಕ 02.04.2018 ರಂದು ಯೂನಿಯನ್ನಿನ ಕಾರ್ಖಾನೆಯ ಪ್ರತಿನಿಧಿಗಳು ಪತ್ರವನ್ನು ಆಡಳಿತ ಮಂಡಳಿಯ ಜನರಲ್ ಮೆನೇಜರ್ ರವರಿಗೆ ಸಲ್ಲಿಸಿದರು. ಪತ್ರವನ್ನು ಸ್ವೀಕರಿಸಿದ ಜೆನರಲ್ ಮ್ಯಾನೇಜರ್, ಯೂನಿಯನೊಂದಿಗೆ ಚರ್ಚಿಸುವುದಾಗಿ ತಿಳಿಸಿದಾಗ್ಯೂ, ಕೆಲವು ಹೆಚ್.ಆರ್ ಮ್ಯಾನೇಜರ್‌ಗಳು ಮತ್ತು ಇನ್ನೂ ಕೆಲವು ಸೂಪರ್‌ವೈಜರ್ ಮತ್ತು ಪ್ರೊಡಕ್ಷನ್ ಮ್ಯಾನೆಜರುಗಳು ಕೆಲವು ವಾಹನ ಚಾಲಕರನ್ನು ಕರೆಸಿಕೊಂಡು, ಯೂನಿಯನ್ ಪ್ರತಿನಿಧಿಗಳ ಮೇಲೆ ಕಾರ್ಖಾನೆಯೊಳಗೆಯೆ ಗೂಂಡಾವರ್ತನೆ ನಡೆಸಿ, ದೈಹಿಕ ಹಲ್ಲೆ, ಜಾತಿ ನಿಂದನೆ ಮತ್ತು ಮಹಿಳಾ ಕಾರ್ಮಿಕರನ್ನು ಅವಮಾನಿಸಿರುತ್ತಾರೆ. 12 ಯುನಿಯನ್ ಕಾರ್ಮಿಕ ಪ್ರತಿನಿಧಿಗಳನ್ನು ಮತ್ತು ಅವರಿಗೆ ಬೆಂಬಲಿಸಿದ ಇನ್ನೂ ಕೆಲವರನ್ನು ಹೀನಾಯವಾಗಿ ಹೊಡೆದು ಕಾರ್ಖಾನೆಯ ಈಚೆಗೆ ದಬ್ಬಿದರು. ಇವರನ್ನು ದುರ್ನಡತೆಯ ಸುಳ್ಳು ಆಪಾದನೆಯ ಮೇಲೆ ಸಸ್ಪೆಂಡ್ ಮಾಡಿದರು. ಗಾಯಗೊಂಡ ಕಾರ್ಮಿಕರಿಗೆ ಯೂನಿಯನ್ ವತಿಯಿಂದ ಕೂಡಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ, ಹಾಗೆಯೇ ಕಾರ್ಮಿಕ ಇಲಾಖೆಯಲ್ಲೂ ದೂರು ನೀಡಲಾಯಿತು. ಪೋಲಿಸ್ ಸ್ಟೇಷನ್ ಸಿಬ್ಬಂಧಿ ಕಾರ್ಖಾನೆಯ ಆಡಳಿತ ವರ್ಗದವರಿಗೆ ಬೆಂಬಲವಾಗಿ ವರ್ತಿಸಿದರು. ಕಾರ್ಮಿಕ ಇಲಾಖೆ ಕೂಡಲೆ ಪ್ರತಿಕ್ರಿಯಿಸಿ ಆಡಳಿತ ವರ್ಗದವರಿಗೆ ನೋಟಿಸ್ ನೀಡಿದರು. ಮಹಿಳಾ ಕಾರ್ಮಿಕರ ಮೇಲೆ ನಡೆದ ಈ ಕ್ರೌರ್ಯ ಹಲ್ಲೆಯ ಕುರಿತು ಕೆಲವು ಪತ್ರಿಕೆಗಳು ವರದಿ ಮಾಡಿದವು. ಪ್ರಾರಂಭದಲ್ಲಿ, ಶಾಹಿ ಆಡಳಿತವು ಈ ಘಟನೆ ಕೆಲವೇ ಗೂಂಡಾ ಕಾರ್ಮಿಕರಿಂದ ಇತರೆ ಕಾರ್ಮಿಕರ ಮೇಲೆ ನಡೆದಿರುವ ಸಣ್ಣ ವಿಷಯ, ಅಂಥಹ ಕಾರ್ಮಿಕರನ್ನು ಈಗಾಗಲೇ ಸಸ್ಪೆಂಡ್ ಮಾಡಲಾಗಿದೆ ಎಂಬ ನಿಲುವು ತಾಳಿದರು. ಆದರೆ, ಯೂನಿಯನ್ ವತಿಯಿಂದ, ಹಲ್ಲೆಗೆ ಸಂಬಂಧಿಸಿದ ಹಲವು ವಿಡಿಯೋ, ಆಡಿಯೋ ಮತ್ತು ಆಸ್ಪತ್ರೆ ದಾಖಲೆಗಳ ಪುರಾವೆಗಳನ್ನು ನೀಡಿ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಸಂಘ ಸಂಸ್ಥೆಗಳಿಗೆ ಸತ್ಯಸಂಗತಿಯನ್ನು ಮನವರಿಕೆ ಮಾಡಲಾಯಿತು. ಅಂತರಾಷ್ಟ್ರೀಯ ಟ್ರೇಡ್ 'ಯೂನಿಯನ್‌ಗಳ ಮತ್ತು ಮಾನವ ಹಕ್ಕು ಸಂಸ್ಥೆಗಳ ಇಂಡಸ್ಟ್ರಿಯಲ್ ಮತ್ತು ಸಿಸಿಸಿ – ಯವರ ಗಮನ ಸೆಳೆಯಲಾಯಿತು.





ಶಾಹಿ 8 ಹೆಚ್ಚಿಗೆ ಅಮೇರಿಕಾದ ಯುನಿವರ್ಸಿಟಿಗಳಿಗೆ ಉಡುಪು ತಯಾರಿಸುತಿತ್ತು. ಯುನಿವರ್ಸಿಟಿ ವಿಧ್ಯಾರ್ಥಿಗಳಿಗೆ ಹೊಂದಿದ ಅಮೇರಿಕಾದ ಮಾನವ ಹಕ್ಕುಗಳ ಸಂಘಟನೆಯೂ ತನ್ನ ಪ್ರತಿನಿಧಿಯನ್ನು ಕಳುಹಿಸಿ ಸ್ವಾತಂತ್ರಿಯ ತನಿಖೆ ನಡೆಸಿದರು. ಅವರು ನೇರವಾಗಿ ಹಲವು ಕಾರ್ಮಿಕರನ್ನು, ಮ್ಯಾನೆಜ್ಮೆಂಟ್ ಅಧಿಕಾರಿಗಳನ್ನು, ಆಸ್ಪತ್ರೆಯನ್ನು ಪೋಲಿಸ್ ಅಧಿಕಾರಿಯನ್ನು, ಪತ್ರಕರ್ತರನ್ನು ಸಂಪರ್ಕಿಸಿ ಮಾಹಿತಿ ಮತ್ತು ದಾಖಲೆಗಳನ್ನು ಪಡೆದು ಒಂದು ಸಮಗ್ರ ವರದಿಯನ್ನು ಹೊರತಂದರು. ಸ್ಥಳೀಯ ನಾಗರೀಕ ಸ್ವಾತಂತ್ರತೆಗಾಗಿ ಜನಪರ ಸಂಘಟನೆಯು ತಮ್ಮದೆಯಾದ ಸತ್ಯಶೋಧನೆ ಮಾಡಿದರು. ಇದರ ಪರಿಣಾಮವಾಗಿ, ಶಾಹಿ ಎಕ್ಸ್‌ಪೋರ್ಟ್ಸ್ ಲಿ ಕಂಪನಿಯ ಮಾಲೀಕರಿಗೂ ಮತ್ತು ಉನ್ನತ ಆಡಳಿತದವರಿಗೂ ಸತ್ಯಸಂಗತಿ ತಿಳಿದು, ಯೂನಿಯನ್ ಪ್ರತಿನಿಧಿಗಳೊಂದಿಗೆ ಚರ್ಚೆಗೆ ಮುಂದಾದರು. ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ರಾಜಿಸಂಧಾನ ಪ್ರಕ್ರಿಯೆ ನಡೆಯಿತು.

**ಕಾರ್ಖಾನೆಯಲ್ಲಿ, ಕೂಡಲೆ ಎಲ್ಲಾ ಕಾರ್ಮಿಕರಿಗೂ ಅನುಕೂಲವಾಗುವ ಹಾಗೆ, ಕುಡಿಯುವ ನೀರಿನ ಶುದ್ಧೀಕರಣದ ಘಟಕವನ್ನು ಸ್ಥಾಪಿಸಲಾಯಿತು.**

ಹಲವು ಸುತ್ತಿನ ಮಾತುಕತೆಯ ನಂತರ, ಕಾರ್ಮಿಕ ಪ್ರತಿನಿಧಿಗಳು ಮತ್ತು ಆಡಳಿತದವರ ನಡುವೆ ಈ ಕೆಳಕಂಡ ಆರೋಗ್ಯಕರ ಒಪ್ಪಂದ ಮಾಡಿಕೊಳ್ಳಲಾಯಿತು:

1 ಕಾರ್ಮಿಕರಿಗೆ ಇರುವ ಯೂನಿಯನ್ ಸೇರುವ ಹಕ್ಕನ್ನು ಯಾವುದೇ ವಿಧಾನದಲ್ಲೂ ಶಾಹಿ ಆಡಳಿತದವರು ವಿರೋಧಿಸುವುದಿಲ್ಲ ಹಾಗೂ ಮೊಟಕುಗೊಳಿಸುವುದಿಲ್ಲ;
2. ಕಾರ್ಖಾನೆಯ ಆವರಣದಲ್ಲಿ ಯೂನಿಯನ್ ಪ್ರತಿನಿಧಿಗಳ ಮೇಲೆ ಆಯೋಜಿತವಾಗಿ ಅಧಿಕಾರ ದುರುಪಯೋಗಿಸಿ ಹಲ್ಲೆ ನಡೆಸಿದ 5 ಉನ್ನತ ಅಧಿಕಾರಿಗಳನ್ನು ಹಾಗೂ ಇನ್ನು 3 ಸಿಬ್ಬಂದಿಯನ್ನು ಕೆಲಸದಿಂದ ಕೂಡಲೆ ವಜಾ ಮಾಡುವುದು;
3. ಅಮಾನತ್ತಿನಲ್ಲಿ ಇರಿಸಿರುವ 15 ಯೂನಿಯನ್ ಪ್ರತಿನಿಧಿಗಳನ್ನು ಹಿಂದಿನ ಎಲ್ಲಾ ಬಾಕಿ ಸಂಬಳದೊಂದಿಗೆ ಕೆಲಸಕ್ಕೆ ಕೂಡಲೆ ವಾಪಸ್ಸು ತೆಗೆದುಕೊಳ್ಳುವುದು;
4. ಇವರು ಕೆಲಸಕ್ಕೆ ಹಾಜರಾಗುವಾಗ, ಕಾರ್ಖಾನೆಯ ಸಾರ್ವಜನಿಕ ಪ್ರಕಟಣ ಧ್ವನಿವರ್ಧಕದ ಮೂಲಕ, ಇವರ ಮೇಲೆ ವಿನಾಕಾರಣ ನಡೆದ ಹಲ್ಲೆಯ ಬಗ್ಗೆ ವಿಷಾಧ ವ್ಯಕ್ತ ಪಡಿಸುವುದು;
5. ಕಾರ್ಮಿಕ ಪ್ರತಿನಿಧಿಗಳ ಮೇಲೆ ಕಾರ್ಖಾನೆಯಲ್ಲಿ ಹಲ್ಲೆ ನಡೆದ ಸಂದರ್ಭದಲ್ಲಿ, ಅವರಿಂದ ಕಿತ್ತು ಕೊಂಡ ತಾಳಿ, ಮಾಂಗಲ್ಯ ಚೈನು, ಮೊಬೈಲು ಮತ್ತು ಇತರೆ ಬೆಲೆ ಬಾಳುವ ವಸ್ತುಗಳಿಗೆ ಪರಿಹಾರ ನೀಡುವುದು;
6. ತೀವ್ರ ಚಿಕಿತ್ಸೆಗೆ ಒಳಗಾದವರ ಆಸ್ಪತ್ರೆ ಖರ್ಚುವೆಚ್ಚವನ್ನು ಭರಿಸುವುದು;
7. ಒಂದು ತಿಂಗಳೊಳಗಾಗಿ ಕಾರ್ಖಾನೆಯ 5 ಸಮಿತಿಗಳಿಗೆ (ಕುಂದುಕೊರತೆ ನಿವಾರಣೆ; ಕ್ಯಾಂಟೀನ್; ಆಂತರಿಕ ಲೈಂಗಿಕ ಕಿರುಕುಳ ನಿವಾರಣ; ಆರೋಗ್ಯ/ಸ್ವಚ್ಚತಾ; ವರ್ಕ್ಸ್ ಸಮಿತಿಗಳು) ಗೌಪ್ಯ ಮತದಾನದ ಪ್ರಕ್ರಿಯೆ ಮೂಲಕ ಕಾರ್ಮಿಕರನ್ನು ಆಯ್ಕೆ ಮಾಡುವುದು.
8. ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು, ಯೂನಿಯನ್ ಪ್ರತಿನಿಧಿಗಳೊಂದಿಗೆ ಪ್ರತಿ ತಿಂಗಳು ಆಡಳಿತದವರು ಸಾಮೂಹಿಕ ಚೌಕಾಸಿ ಸಭೆ ನಡೆಸುವುದು.

ಒಪ್ಪಂದದಲ್ಲಿನ ಎಲ್ಲಾ ಅಂಶಗಳನ್ನು ಆಡಳಿತ ವರ್ಗದವರು ಪ್ರಾಮಾಣಿಕವಾಗಿ ಅನುಷ್ಠಾನ ಮಾಡಿರುತ್ತಾರೆ. ಆದೇ ರೀತಿ, ಯೂನಿಯನ್ ಪ್ರತಿನಿಧಿಗಳೂ ಸಭೆಗೆ ಪೂರ್ವ ತಯಾರಿಕೆ ಮತ್ತು ಅಜೆಂಡಾ ಪ್ರಕಾರ ಚರ್ಚಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದಾರೆ.



[redacted]

## ಅರವಿಂದ್ ಲಿ ಮೈಸೂರು ರಸ್ತೆ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ನಡೆಯುತ್ತಿರುವ ಅರವಿಂದ್ ಲಿ ಕಾರ್ಖಾನೆಯಲ್ಲಿ 2500 ಜನ ಕಾರ್ಮಿರು ಕೆಲಸ ಮಾಡುತ್ತಿದ್ದು ಕಾರ್ಖಾನೆಯಲ್ಲಿ ಅಂತರಾಷ್ಟ್ರೀಯ ಬ್ರಾಂಡ್‌ಗಳಾದ ಹೆಚ್ & ಎಂ, ಗ್ಯಾಪ್, ಲೀವೈಸ್ ಇನ್ನೂ ಮುಂತಾದ ಉಡುಪುಗಳು ತಯಾರಿ ಆಗುತ್ತಿವೆ. ಮುಂದಿನ ದಿನಗಳಲ್ಲಿ ಗ್ಯಾಪ್ ಮತ್ತು ಅರವಿಂದ್ ಕಂಪನಿ ದೇಶದಾದ್ಯಂತ 40ಕ್ಕೂ ಹೆಚ್ಚು ಔಟ್‌ಲೆಟ್‌ಗಳನ್ನು ತೆರೆಯಲು ಉದ್ದೇಶಿಸಿರುತ್ತಾರೆ.

ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಕೆಲಸದ ಸ್ಥಳದಲ್ಲಿ ತೀರ ಅಗೌರವದ ವರ್ತನೆ, ಉತ್ಪಾದನೆಯ ಒತ್ತಡ; ಅವಮಾನಕರ ಬೈಗುಳ, ಶೌಚಾಲಯಕ್ಕೆ ಹೋಗಲು ತಡೆ ಮತ್ತು ಮಾನಸಿಕವಾದ ಹಿಂಸೆ, ಕೂಲಿ ಸಮಸ್ಯೆ, ಕುಡಿಯಲು ಶುದ್ಧ ನೀರು ಇಲ್ಲದೆ ಇರುವುದು ಇತ್ಯಾದಿ ಸಮಸ್ಯೆಗಳು ಎದುರಿಸುತ್ತಿರುವುದನ್ನು ವ್ಯಕ್ತಪಡಿಸುತ್ತಿದ್ದರು. ಕಳೆದ ಎರಡು ವರ್ಷಗಳಿಂದ, ಈ ವಿಷಯಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಸಂಘಟಿತರಾಗಲು ಚರ್ಚಿಸಲಾಯಿತು. ಕಾರ್ಮಿಕರಿಗೆ, ಸಾಮೂಹಿಕ ಚೌಕಾಸಿ ಪ್ರಕ್ರಿಯೆ, ಅಂದರೆ, ಗೌರವದಿಂದ ಆಡಳಿತ ವರ್ಗದವರೊಂದಿಗೆ ಮಾತುಕತೆಯ ಮೂಲಕ ವಿಷಯಗಳನ್ನು ಚರ್ಚಿಸಿ ಸುಧಾರಿಸಬಹುದೆಂಬ ನಂಬಿಕೆ ಹುಟ್ಟಿತು. ಬಹಳಷ್ಟು ಕಾರ್ಮಿಕರು ಸದಸ್ಯತ್ವ ಪಡೆದು ದಿನಾಂಕ 18.02.2018 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಕಾರ್ಖಾನೆಯ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಈ ವಿಷಯದ ಕುರಿತು, ಆಡಳಿತ ಮಂಡಳಿಯ ಜೊತೆ ಚರ್ಚೆ ಮಾಡಲು 9 ಕಾರ್ಮಿಕ ಪ್ರತಿನಿಧಿಗಳನ್ನು ಗೌಪ್ಯ ಮತದಾನದ ಮೂಲಕ ಆಯ್ಕೆ ಮಾಡಲಾಯಿತು.

1. ಕೆಲಸದ ಸ್ಥಳದಲ್ಲಿ ಗೌರವಯುತ ವಾತಾವರಣ ಸೃಷ್ಟಿಸುವ ಬಗ್ಗೆ;
2. ಉತ್ಪಾದನೆಯ ಒತ್ತಡವನ್ನು ಕಡಿಮೆ ಮಾಡುವ ಬಗ್ಗೆ;
3. ವೇತನದಲ್ಲಿ ಕನಿಷ್ಠ ರೂ 3000 ಹೆಚ್ಚಳ ಮಾಡುವ ಬಗ್ಗೆ;

ಪ್ರಸ್ತಾವನೆಗೆ ಸುಮಾರು 500ಕ್ಕೂ ಹೆಚ್ಚು ಕಾರ್ಮಿಕರ ತಮ್ಮ ಒಪ್ಪಿಗೆ ನೀಡಿದ ನಂತರ, ಆಯ್ಕೆಯಾದ ಪ್ರತಿನಿಧಿಗಳು ಬೇಡಿಕೆಗಳ ಪ್ರಸ್ತಾವನೆಯನ್ನು ದಿನಾಂಕ 24.07.2018 ರಂದು ಆಡಳಿತ ಮಂಡಳಿಯ ಜನರಲ್ ಮೆನೇಜರ್ ರವರಿಗೆ ಸಲ್ಲಿಸಿದರು. ಪ್ರಾರಂಭದಲ್ಲಿ, ಆಡಳಿತ ಮಂಡಳಿಯವರು ಮಾತುಕತೆಗೆ ದಿನಾಂಕವನ್ನು ಗೊತ್ತುಪಡಿಸಿ, ನಂತರ ಕಾರ್ಖಾನೆಯಲ್ಲಿ ಯಾವುದೆ ಸಮಸ್ಯೆ ಇಲ್ಲವಾದುದರಿಂದ ಕಾರ್ಮಿಕರ ಜೊತೆ ಮಾತನಾಡುವ ಅವಶ್ಯಕತೆ ಇರುವುದಿಲ್ಲ ಎಂದು ಮಾತುಕತೆಯ ಕೋರಿಕೆಯನ್ನು ನಿರಾಕರಿಸಿದರು.

ಇದೇ ಸಂದರ್ಭದಲ್ಲಿ ಅರವಿಂದ ಆಡಳಿತ ವರ್ಗದವರು, ಕಾರ್ಮಿಕರನ್ನು ಯೂನಿಯನ್‌ರವರೊಂದಿಗೆ ಸೇರಬೇಡಿ ಎಂದು ದಿನಾ ಹಿಂಸಿಸಲು ಪ್ರಾರಂಭಿಸಿದರು. ಕುಂ.ಪೂಜಾಕುಮಾರಿ, ಎಂಬ 18 ವಯಸ್ಸಿನ ಮಹಿಳಾ ಟೈಲರ್ ಮತ್ತು ಕುಂ.ದೀಪಾ. ಎಂಬವರಿಗೆ ಕಪ್ಪಾಳಕ್ಕೆ ಹೊಡೆದ ಪ್ರಕರಣದಲ್ಲಿ ದೂರು ದಾಖಲೆಯಾಗಿದೆ. ಇವರನ್ನು ಹಿಂಸಿಸಿ ಕೆಲಸದಿಂದ ರಾಜಿನಾಮೆ ನೀಡುವಂತೆ ಮಾಡಲಾಗಿದೆ. ಯೂನಿಯನ್ ಪ್ರತಿನಿಧಿಗಳನ್ನು ಮತ್ತು ಇತರೆ ಕಾರ್ಮಿಕರನ್ನು ಯೂನಿಯನ್ ಸೇರದಂತೆ ಪ್ರತಿ ದಿನ ಬೆದರಿಕೆಗೆ ಮತ್ತು ಹಿಂಸೆಗೆ ಒಳಪಡಿಸುತ್ತಿದ್ದಾರೆ. ಈ ರೀತಿಯ ಕಾರ್ಮಿಕ ವಿರೋಧಿ ನೀತಿ, ಬ್ರಾಂಡುಗಳ ಕೋಡ್, ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾಡುತ್ತಿದ್ದಾಗಿಯೂ, ಯೂನಿಯನ್ ವತಿಯಿಂದ ಮಾತುಕತೆಯ ಪ್ರಾಮಾಣಿಕತೆಯ ಬಗ್ಗೆ ನಂಬಿಕೆ ಕಳೆದುಕೊಂಡಿರುವುದಿಲ್ಲ. ಕಾರ್ಮಿಕ ಇಲಾಖೆ, ಬ್ರಾಂಡುಗಳು ಮತ್ತು ನೇರ ಮಾತುಕತೆಯ ಮೂಲಕ ಆಡಳಿತ ವರ್ಗದವರನ್ನು ಸಾಮೂಹಿಕ ಚೌಕಾಸಿಗೆ ಕೂರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ.





## ಕೆ ಮೋಹನ್ ಕಾರ್ಖಾನೆ:

ಬೊಮ್ಮನಹಳ್ಳಿಯಲ್ಲಿರುವ ಕೆ ಮೋಹನ್ ಕಾರ್ಖಾನೆಯಲ್ಲಿ ಸಾಮುಹಿಕ ಚೌಕಾಸಿ ನಡೆಸುವುದರ ಸಲುವಾಗಿ, ಈ ಕಾರ್ಖಾನೆಯ ಕಾರ್ಮಿಕರ ಸರ್ವಸದಸ್ಯರ ಸಭೆಯನ್ನು ದಿನಾಂಕ 11.02.2018 ರಂದು ನಡೆಸಲಾಯಿತು. ಸಭೆಯಲ್ಲಿ 9 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಈ ಸಭೆಯಲ್ಲಿ ಚರ್ಚೆ ಮಾಡಿ ಈ ಕೆಳಕಂಡ ತೀರ್ಮಾನಗಳು ಕೈಗೊಳ್ಳಲಾಯಿತು.

1. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮಾತುಕತೆ;
2. ಕೆಲಸದ ಸ್ಥಳದಲ್ಲಿ ಗೌರವಯುತ ವಾತವರಣ ನಿರ್ಮಿಸಲು ಪ್ರಯತ್ನಿಸುವುದು;
3. ಸಂಬಳದಲ್ಲಿ ರೂ 3000 ಹೆಚ್ಚಳಕ್ಕಾಗಿ ಮಾತುಕತೆ ನಡೆಸುವುದು;

ಕಾರ್ಮಿಕರಿಂದ ಸಹಿ ಸಂಗ್ರಹಣೆ ಮಾಡುತಿದ್ದಾಗಲೆ, ಕಾರ್ಖಾನೆಯನ್ನು ಸ್ಥಳಾಂತರ ಮಾಡುವ ನೆಪದಲ್ಲಿ ಕಾರ್ಖಾನೆಯನ್ನು ಮುಚ್ಚಿದರು. ಮೊದಲಿಗೆ ಸ್ಯಾಪಲ್ ಟೈಲರುಗಳನ್ನು ವರ್ಗಾವಣೆ ಮಾಡಿ ಕ್ರಮೇಣವಾಗಿ ಇತರೆ ಕಾರ್ಮಿಕರನ್ನು ಚದುರಿಸಲಾಯಿತು.

## ಮೇ ದಿನಾಚರಣೆ ಕಾರ್ಯಕ್ರಮ:

ದಿನಾಂಕ 01–05–2016ರಂದು ಗಾರ್ಮೆಂಟ್ ಕಾರ್ಮಿಕರು ಐಕ್ಯಾತ ಮನೋಭಾವದೊಂದಿಗೆ ಎನ್ ಜಿ ವಿ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗೆಲಸ ಮಾಡುವ ಕಾರ್ಮಿಕರಿಗೆ ಬೆಂಬಲ ನೀಡುವ ಮೂಲಕ ವಾರದ ರಜೆ ನೀಡಬೇಕೆಂದು ಎನ್ ಜಿ ವಿ ಮಾಲಿಕರಿಗೆ ಮನವಿ ಪತ್ರ ನೀಡುವ ಮೂಲಕ ಮೇ ದಿನದ ಮಹತ್ವವನ್ನು ತಿಳಿಸಲಾಯಿತು. ಬೊಮ್ಮನಹಳ್ಳಿ, ಮೈಸೂರು ರಸ್ತೆ, ಪೀಣ್ಯ ಮತ್ತು ದಾವಣಗೆರೆ ಈ ಕ್ಷೇತ್ರಗಳಿಂದ ಕಾರ್ಮಿಕರನ್ನು ಸೇರಿಸಿ ದಿನಾಂಕ 01.05.2017 ರಂದು ಗಾರ್ಮೆಂಟ್ ಕಾರ್ಮಿಕರ ಕುಟುಂಬಗಳ ನಿರ್ವಹಣೆಯ ಪರಿಸ್ಥಿತಿಗಳು, ಸಂಬಳದ ತಾರತಮ್ಯ, ಸಾಮಾಜಿಕ ಭದ್ರತೆ, ಲೈಂಗಿಕ ಕಿರುಕುಳ, ಹಾಗೂ ಮೇ ದಿನದ ಮಹತ್ವ ಬಗ್ಗೆ ಕಾರ್ಮಿಕರಲ್ಲಿ ಅರಿವು ಮೂಡಿಸಲು ಕಾರ್ಮಿಕರು ಮತ್ತು ಅವರ ಮಕ್ಕಳಿಂದ ನಾಟಕ, ಕರಪತ್ರಗಳ ಹಂಚಿಕೆ, ಆಂದೋಲನಗಳು, ಮಾಡಲಾಯಿತು. ಕಾರ್ಮಿಕರ ಶ್ರಮದ ಬಗ್ಗೆ ಕಾರ್ಮಿಕರ ಮಕ್ಕಳಲ್ಲಿ ಪ್ರಂಬಧ ಸ್ಪರ್ಧೆ, ಚರ್ಚಾಸ್ಪರ್ಧೆ, ಚಿತ್ರಕಲೆ, ಕಾರ್ಯಕ್ರಮಗಳು ಮಾಡಲಾಯಿತು.

ದಿನಾಂಕ 01.11.207 ರಂದು ಜೊತೆ ಗೂಡಿ ಕನಸು ಕಾಣೋಣ ಎಂಬ ಕಾರ್ಯಕ್ರಮವನ್ನು ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಳಲಾಯಿತ್ತು ಈ ಕಾರ್ಯಕ್ರಮದಲ್ಲಿ ರಾಜ್ಯದ್ಯಾಂತ 400 ಗಾರ್ಮೆಂಟ್ ಕಾರ್ಮಿಕರು ಮತ್ತು ಅವರ ಮಕ್ಕಳು ಒಳಗೊಂಡಂತೆ, ಕೃಷಿ ಕೂಲಿ ಕಾರ್ಮಿಕರ, ಮನೆಕೆಲಸ ಕಾರ್ಮಿಕರ, ಬೀಡಿ ಕಾರ್ಮಿಕರ, ಕಟ್ಟಡ ಕಾರ್ಮಿಕರ, ನಿವೃತ ಅಸಂಘಟಿತ ಕಾರ್ಮಿಕರ ಯೂನಿಯನ್ ಗಳ ಕಾರ್ಮಿಕರು ಮತ್ತು ಮಕ್ಕಳು ಒಟ್ಟು ಸುಮಾರು 600 ಜನ ಭಾಗವಹಿಸಿದ್ದರು. ದಿನಾಂಕ 01.05.2018 ರಂದು ಗಾರ್ಮೆಂಟ್ಸ್ ಕಾರ್ಮಿಕರು, ಮನೆಗೆಲಸ ಕಾರ್ಮಿಕರು ನಿವೃತ್ತ ಅಸಂಘಟಿತ ಕಾರ್ಮಿಕರು ಬೀಡಿ ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರು ಸ್ವತಂತ್ರ ಉದ್ಯಾನವನದಲ್ಲಿ ಸೇರಿ ಮೇ ದಿನದ ಮಹತ್ವದ ಬಗ್ಗೆ ಮತ್ತು ಅಸಂಘಟಿತ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವುದರ ಮೂಲಕ ಮೇ ದಿನದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.



[redacted]

# ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ KOOGU ]

ಸರ್ವಸದಸ್ಯರ ಸಭೆ 16.12.2018 – 2016–18ರ ವರದಿ

## ದಾವಣಗೆರೆಯಲ್ಲಿ ಕೂಗು ಯೂನಿಯನ್

ಕಳೆದ 2–3 ವರ್ಷಗಳಿಂದ ದಾವಣಗೆರೆ ನಗರದಲ್ಲಿ ಮತ್ತು ಚಿತ್ರದುರ್ಗದಲ್ಲಿ ಕೆಲವು ಗಾರ್ಮೆಂಟ್ ಕಾರ್ಖಾನೆಗಳನ್ನು ತೆರೆಯಲಾಗಿದೆ. ಸಧ್ಯಕ್ಕೆ ನಮಗೆ ತಿಳಿದ ಹಾಗೆ ಸುಮಾರು 500–800 ಕಾರ್ಮಿಕರು ಹೊಂದಿರುವ 10 ಕಾರ್ಖಾನೆಗಳಿರುತ್ತವೆ. ಹಾಗೂ 200–300 ಕಾರ್ಮಿಕರನ್ನು ಹೊಂದಿರುವ 10 ಕಾರ್ಖಾನೆಗಳು ಇರುತ್ತವೆ. ಸುತ್ತ ಮುತ್ತಲಿನ ಗ್ರಾಮಗಳಿಂದ ಹಾಗೂ ಕಾರ್ಮಿಕರು ವಾಸ ಮಾಡುವ ನಗರ ಪ್ರದೇಶಗಳಿಂದ ಮಹಿಳೆಯರು ಈ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಗ್ರಾಮದಿಂದ ಬರುವ ಬಹುತೇಕ ಮಹಿಳಾ ಕಾರ್ಮಿಕರಿಗೆ ಕಾರ್ಮಿಕ ಕಾನೂನಿನ ಹಾಗೂ ಅವರ ಹಕ್ಕುಗಳ ಬಗ್ಗೆ ಅರಿವು ಬಹಳ ಕಡಿಮೆಇರುತ್ತದೆ. ಹಾಗಾಗಿ ಈ ಕಾರ್ಖಾನೆಗಳು ಕಾರ್ಮಿಕರಿಗೆ ಬಹಳ ಕಡಿಮೆ ಸಂಬಳದಲ್ಲಿ ದುಡಿಸುತ್ತಿದ್ದಾರೆ – ಹೆಲ್ಪರ್‌ಗಳಿಗೆ 130–170. ಟೇಲರ್‌ಗಳಿಗೆ 250–300.ಇದು ಮಾತ್ರವಲ್ಲದೇ ಈ ಕಾರ್ಖಾನೆಗಳು ಕಾರ್ಮಿಕರಿಗೆ ಇ.ಎಸ್.ಐ. ಪಿ.ಎಫ್. ಬೋನಸ್ ಮತ್ತು ಗ್ರಾಚ್ಯುಟಿ, ಕನಿಷ್ಠ ವೇತನ ಇವೆಲ್ಲವನ್ನು ವಂಚಿಸುತ್ತಿದ್ದಾರೆ. ಕಾರ್ಮಿಕರಿಗೆ ಕೆಲಸದ ಅವಶ್ಯಕತೆ ಇರುವುದರಿಂದ ಈ ರೀತಿಯ ಬಡತನದ ಸಂಬಳ ಮತ್ತು ಯಾವುದೇ ಸೌಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದಾರೆ. ಕಳೆದ 1 ವರ್ಷದಿಂದ ಕಾರ್ಮಿಕರನ್ನು ಸಂಘಟಿಸಿ ಉತ್ತಮ ಸೌಲಭ್ಯಗಳಿಗಾಗಿ ಹಾಗೂ ಯೋಗ್ಯ ಸಂಬಳಕ್ಕಾಗಿ ಮಾಲೀಕರೊಂದಿಗೆ ಸಾಮೂಹಿಕ ಚೌಕಾಸಿ ನಡೆಸುವ ಸಾಮರ್ಥ್ಯತೆಯನ್ನು ಬಲಪಡಿಸಲು ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ ದಾವಣಗೆರೆ ಶಾಖೆ ಪ್ರಯತ್ನಿಸುತ್ತಿದೆ. ಸಧ್ಯಕ್ಕೆ 85 ಕಾರ್ಮಿಕರು ಯೂನಿಯನ್ನಿನ ಸದಸ್ಯತ್ವ ಪಡೆದಿರುತ್ತಾರೆ. ಶಾಖೆಯ ಕಾರ್ಯಕಾರಿ ಸಮಿತಿಯು ಪ್ರತೀ ತಿಂಗಳು ಸಭೆ ಸೇರುತ್ತದೆ.

## ನಮ್ಮ ಮುಂದಿರುವ ಸವಾಲುಗಳು:–

1. ಈಗಿನ ಪರಿಸ್ಥಿತಿಯಲ್ಲಿ ನಮ್ಮ ಅವಶ್ಯಕತೆಗಳನ್ನು ಒಳಗೊಂಡಂತೆ ಆಹಾರ, ಮಕ್ಕಳ ಶಿಕ್ಷಣ, ಬಟ್ಟೆ, ವಸತಿ, ಆರೋಗ್ಯ, ಮನೋರಂಜನೆ ಇತ್ಯಾದಿ ಮತ್ತು ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಅವಶ್ಯವಿರುವರೂ 21000/– ಕನಿಷ್ಠ ವೇತನಕ್ಕಾಗಿ ಹೋರಾಟ ತೀವ್ರಗೊಳಿಸುವುದು.
2. ಕೆಲಸದ ಸ್ಥಳದಲ್ಲಿ ಗೌರವಯುತ ವಾತವರಣ ಮತ್ತು ಯಾವುದೇ ರೀತಿಯ ಒತ್ತಡಗಳಿಲ್ಲದೇ ಕೆಲಸ ಮಾಡಿಕೊಂಡು ಹೋಗುವಂತೆ ವಾತವರಣ ಸೃಷ್ಟಿಸಲು ಕಾರ್ಮಿಕರನ್ನು ಬಲಪಡಿಸುವುದು.
3. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳ ದೌರ್ಜನ್ಯದ ವಿರುದ್ಧ ಹೋರಾಟ ಮಾಡುವುದು ಮತ್ತು ಮಹಿಳೆಯರ ಮೇಲಾಗುವ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಯುವುದಕ್ಕೆ ಸಮಿತಿಗಳನ್ನು ಬಲಪಡಿಸುವುದು.
4. ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡಲು ಹೊರಟಿರುವ ಸರ್ಕಾರದ ವಿರುದ್ಧ ಉಗ್ರ ಹೋರಾಟ ಕೈಗೊಳ್ಳುವುದು ಅಥವಾ ಇತರೆ ಸಂಘಟನೆಗಳ ಜೊತೆ ಕೈ ಜೋಡಿಸುವುದು.
5. ಕಾರ್ಮಿಕರು ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಾಲೀಕ ವರ್ಗದವರ ಜೊತೆ ಸೌಹಾರ್ದಯುತ ಸಂಬಂಧವನ್ನು ಹೊಂದಲು ಸಾಮೂಹಿಕ ಚೌಕಾಸಿಗೆ ಇಳಿಯುವುದು.
6. ಜಾತಿ ಧರ್ಮದ ಹೆಸರಿನಲ್ಲಿ ಕಾರ್ಮಿಕರ ಐಕ್ಯತೆಗೆ ದಕ್ಕೆ ತರುವಲ್ಲಿ ಕೆಲಸ ಮಾಡುತ್ತಿರುವ ಕೋಮುವಾದಿಗಳ ವಿರುದ್ಧ ಮತ್ತು ಸಂವಿಧಾನದ ಉಳುವಿಗಾಗಿ ಹೋರಾಟ ಮಾಡುವುದು.

ಸ್ವಾಮಿ ಟಿ.ಎಸ್
ಪ್ರಧಾನ ಕಾರ್ಯದರ್ಶಿ



**KARNATAKA GARMENT WORKERS UNION**
**INCOME & EXPENDITURE ACCOUNT FOR THE YEAR ENDED 31.12.2016**

| EXPENDITURE | AMOUNT | INCOME | AMOUNT |
|---|---|---|---|
| To | ₹ | By | ₹ |
| JCTU Action | 3,000.00 | Membership and Subscription | 9,970.00 |
| Printing & Stationery | 13,154.00 | Membership Renewal | 560.00 |
| Meeting Expenses | 8,622.00 | Contribution from workers | 7,500.00 |
| Court Charges | 10,000.00 | S.B interest | 11,035.00 |
| General Body Meeting | 19,985.00 | | |
| Audit fee | 6,000.00 | Excess of Expenditure over Income | 34,989.00 |
| Lawyers Fee | 300.00 | | |
| Travelling Expenses | 2,598.00 | | |
| Office maintenance | 395.00 | | |
| **TOTAL** | **64,054.00** | **TOTAL** | **64,054.00** |

**BALANCE SHEET AS AT 31.12.2016**

| LIABILITIES | | AMOUNT | ASSETS | AMOUNT |
|---|---|---|---|---|
| | | ₹ | | ₹ |
| GENERAL FUND: | | | | |
| Balance b/f | 2,28,665.00 | | Closing Balance: | |
| Less: Excess of Exp over Income | (34,989.00) | | Cash on Hand | 15,731.00 |
| | | 1,93,676.00 | Cash at Canara Bank | 1,77,945.00 |
| **TOTAL** | | **1,93,676.00** | **TOTAL** | **1,93,676.00** |

BANGALORE
DATED: 03.12.2018

for S S NAYAK & CO
CHARTERED ACCOUNTANTS
ICAI FRN 011615 S
(SURENDRA S. NAYAK)
Proprietor
M No. 44045

**KARNATAKA GARMENT WORKERS UNION**
**RECEIPT AND PAYMENT ACCOUNT FOR THE YEAR ENDED 31.12.2018**

| RECEIPTS | AMOUNT | PAYMENTS | AMOUNT |
|---|---|---|---|
| | ₹ | | ₹ |
| To | | By | |
| Balance b/f | | JCTU Action | 3,000.00 |
| Cash on Hand | 7,626.00 | Printing & Stationery | 13,154.00 |
| Cash at Canara Bank | 2,21,039.00 | Meeting Expenses | 8,622.00 |
| | | Court Charges | 10,000.00 |
| Membership and Subscription | 9,970.00 | General Body Meeting | 19,985.00 |
| Membership Renewal | 560.00 | Audit fee | 6,000.00 |
| | | Lawyers Fee | 300.00 |
| | | Travelling Expenses | 2,598.00 |
| | | Office maintenance | 395.00 |
| Contribution from workers | 7,500.00 | | |
| S.B interest | 11,035.00 | Closing Balance: | |
| | | Cash on Hand | 15,731.00 |
| | | Cash at Canara Bank | 1,77,945.00 |
| **TOTAL** | **2,57,730.00** | **TOTAL** | **2,57,730.00** |

BANGALORE
DATED: 03.12.2018

for S S NAYAK & CO
CHARTERED ACCOUNTANTS
ICAI FRN 011615 S
(SURENDRA S. NAYAK)
Proprietor
M No. 44045



[redacted]

## KARNATAKA GARMENT WORKERS UNION

### INCOME & EXPENDITURE ACCOUNT FOR THE YEAR ENDED 31.12.2017

| EXPENDITURE | AMOUNT ₹ | INCOME | AMOUNT ₹ |
|---|---|---|---|
| To | | By | |
| ICTU Action | | Membership and Subscription | 59,830.00 |
| Office Maintenance | 1,089.00 | | |
| Printing & Stationery | 280.00 | Contribution from workers | 8,480.00 |
| Documentation | 500.00 | S B interest | 8,302.00 |
| Meeting Expenses | 272.00 | | |
| Travelling Expenses | 14,120.00 | | |
| Bhoomi Mattu Vasati Hakku Horata Samithi Contribution | 7,000.00 | | |
| Excess of Income over Expenditure | 53,351.00 | | |
| TOTAL | 76,612.00 | TOTAL | 76,612.00 |

### BALANCE SHEET AS AT 31.12.2017

| LIABILITIES | | AMOUNT ₹ | ASSETS | AMOUNT ₹ |
|---|---|---|---|---|
| GENERAL FUND | | | | |
| Balance b/f | 1,93,676.00 | | Closing Balance: | |
| Add: Excess of Income over Expenditure | 53,351.00 | | Cash on Hand | 23,807.00 |
| | | 2,47,027.00 | Cash at Canara Bank | 2,23,220.00 |
| TOTAL | | 2,47,027.00 | TOTAL | 2,47,027.00 |

BANGALORE
DATED: 03.12.2018

for S S NAYAK & CO
CHARTERED ACCOUNTANTS
ICAI FRN 011615 S

(SURENDRA S. NAYAK)
Proprietor
M No. 44045

## KARNATAKA GARMENT WORKERS UNION

### RECEIPT AND PAYMENT ACCOUNT FOR THE YEAR ENDED 31.12.2017

| RECEIPTS | AMOUNT ₹ | PAYMENTS | AMOUNT ₹ |
|---|---|---|---|
| To | | By | |
| Balance b/f | | ICTU Action | |
| Cash on Hand | 15,731.00 | Office Maintenance | 1,089.00 |
| Cash at Canara Bank | 1,77,945.00 | Printing & Stationery | 280.00 |
| | | Documentation | 500.00 |
| Membership and Subscription | 59,830.00 | Meeting Expenses | 272.00 |
| | | Travelling Expenses | 14,120.00 |
| Contribution from workers | 8,480.00 | Bhoomi Mattu Vasati Hakku Horata Samithi Contribution | 7,000.00 |
| S B interest | 8,302.00 | Closing Balance: | |
| | | Cash on Hand | 23,807.00 |
| | | Cash at Canara Bank | 2,23,220.00 |
| TOTAL | 2,70,288.00 | TOTAL | 2,70,288.00 |

BANGALORE
DATED: 03.12.2018

for S S NAYAK & CO
CHARTERED ACCOUNTANTS
ICAI FRN 011615 S

(SURENDRA S. NAYAK)
Proprietor
M No. 44045



[redacted]

WORKERS OF THE WORLD UNITE दुनिया के मज़दूरों संघठित हो ! ವಿಶ್ವ ಕಾರ್ಮಿಕರೇ ಒಂದಾಗಿ ! دونیا کے مزدور متحد ہو !

# गार्मेंट मज्दूरों !

## क्या आप टैलर, हेल्पर, आपरेटर है ?

आपके वेतन मे कितना बढाव होना चाहिए?

## ३० प्रतिशत यानि रुप्या २५०० ?

## क्या ये संभव है ?

आपका वार्षिक बढाव (इन्क्रिमेंट) कितना होना चाहिए ?
आपका मूल वेतन कितना होना चाहिए ?
फ़ैक्ट्रि का लाभ और आपका बढाव मे क्या सम्बंध है ?
आपका कितने सालों का अनुभव है ? अनुभव को कैसे पेहचानेंगे ?
बढते मेहंगाइ को जूझने के लिये आप वेतन मे क्या बदलाव लाना चाहिए ?
क्या आप जानते है भत्ता क्या होता है ? और कौन सा भत्ता आपके वेतन का बहुमूल्य भाग है ?
क्या आपका वेतन आपके परिवार कि जरूरतों के साथ सम्बोधित करता है ?
सम्विदिक बोनस का मतलब क्या है ? लाभ आधारित बोनस का मतलब क्या है ? इत्यादि ........

चर्चा के लिये न्योता !

WORKERS OF THE WORLD UNITE दुनिया के मज़दूरों संघठित हो ! ವಿಶ್ವ ಕಾರ್ಮಿಕರೇ ಒಂದಾಗಿ ! دونیا کے مزدور متحد ہو !

# ಗಾರ್ಮೆಂಟ್ ಕಾರ್ಮಿಕರೇ,

## ನೀವು ಟೇಲರಾ? ಹೆಲ್ಪರಾ?

ನಿಮ್ಮ ಸಂಬಳದಲ್ಲಿ ಎಷ್ಟು ಹೆಚ್ಚಳ ಬಯಸುತ್ತೀರಿ?
ಶೇ.30 ರಷ್ಟು, ಅಂದರೆ ರೂ. 2500? ಇದು ಸಾಧ್ಯವೇ?

ನಿಮ್ಮ ವಾರ್ಷಿಕ ಇನ್ಕ್ರಿಮೆಂಟ್ ಎಷ್ಟಾಗಬೇಕು?
ಮೂಲ ವೇತನ (ಬೇಸಿಕ್) ಎಷ್ಟಕ್ಕೆ ನಿಗಧಿಯಾಗಬೇಕು?
ಲಾಭಕ್ಕೂ ಇನ್ಕ್ರಿಮೆಂಟಿಗೂ ಇರುವ ಸಂಬಂಧವೇನು?
ನಿಮಗೆ ಎಷ್ಟು ವರ್ಷದ ಅನುಭವವಿದೆ?
ಅನುಭವವನ್ನು ಗುರುತಿಸುವುದು ಹೇಗೆ?
ಗಗನಕ್ಕೆ ಏರುತ್ತಿರುವ ಬೆಲೆ ಮತ್ತು ನಮ್ಮ ಸಂಬಳವನ್ನು ಸರಿದೂಗಿಸಬೇಕಾದರೆ ಏನಾಗಬೇಕು?
ಭತ್ಯೆಗಳೆಂದರೇನು? ಯಾವ ಭತ್ಯೆಗಳು ಸಂಬಳಕ್ಕೆ ಸೇರುತ್ತವೆ?
ಕುಟುಂಬದ ಅವಶ್ಯಕತೆಗೂ ಸಂಬಳಕ್ಕೂ ಸಂಬಂಧವಿದೆಯೇ?
ಕಡ್ಡಾಯ ಬೋನಸ್ ಅಂದರೇನು?
ಲಾಭಾಧಾರಿತ ಬೋನಸ್ ಎಂದರೇನು?

## ಮುಂತಾದ ಪ್ರಶ್ನೆಗಳ ಬಗ್ಗೆ. . . . .

## ಚರ್ಚೆಗೆ ಆಹ್ವಾನ !

ಸಮಯ: ಸೋಮವಾರದಿಂದ ಗುರುವಾರ / ಭಾನುವಾರ: 12 ರಿಂದ 07 ಗಂಟೆಯವರೆಗೆ,
ಶನಿವಾರ: 03 ರಿಂದ 07 ಗಂಟೆಯವರೆಗೆ, ಶುಕ್ರವಾರ: ರಜಾ ದಿನ.
ಸ್ಥಳ: ಸ್ಥಳ: ಕಾರ್ಮಿಕ ಸಂವಾದ ಕೇಂದ್ರ, 8/3. ರಾಜೇಶ್ವರಿ ನಿಲಯ, ಕೆಂಚನಹಳ್ಳಿ ಬಸ್ ನಿಲ್ದಾಣ, ರಾಜರಾಜೇಶ್ವರಿ ನಗರ, ಬೆಂಗಳೂರು–98
ಫೋ: 9880016173, 9980908476, 9916692379, 8884259069



[redacted]

# ಮೇ ದಿನ

KARNATAKA GARMENT WORKERS UNION

ಅಂತರಾಷ್ಟ್ರೀಯ ಕಾರ್ಮಿಕರ ದಿನ, ರಾಷ್ಟ್ರೀಯ ಗಡಿಗಳನ್ನು, ಜನಾಂಗೀಯತೆಯನ್ನು, ಜಾತಿಗಳನ್ನು ಹಾಗೂ ಧಾರ್ಮಿಕ ವ್ಯತ್ಯಾಸಗಳನ್ನು ಮೀರಿ ಐಕ್ಯತೆ ಸಾಧಿಸಿದ ದಿನ. ಮಾಲೀಕ ವರ್ಗದ ಸುಲಿಗೆಯ ವಿರುದ್ಧ, 200 ವರ್ಷಗಳ ಐಕ್ಯ ಹೋರಾಟದ ಸೋಲು-ಗೆಲುವುಗಳ ಬಗ್ಗೆ ವಿಮರ್ಶಿಸುವ ದಿನ.

ಮಾಲೀಕ ವರ್ಗದ ವಿರುದ್ಧ, ವೀರ ಹೋರಾಟಗಳನ್ನು ನಡೆಸಿ, ನಮಗೆ 8-ಗಂಟೆ ಕೆಲಸದ ವೇಳಾಮಿತಿ, ರಜೆ ಸೌಲಭ್ಯ, ಪ್ರಸೂತಿ ಸೌಲಭ್ಯ, ಸಮಾನ ಕೂಲಿ, ಗ್ರ್ಯಾಚ್ಯುಟಿ, ಬೋನಸ್, ಓಟಿ ದರ, ಇ.ಎಸ್.ಐ, ಪಿ.ಎಫ್ ಇತ್ಯಾದಿ ಸೌಲಭ್ಯಗಳು ತಂದು ಕೊಟ್ಟ ಕಾರ್ಮಿಕ ವರ್ಗದ ಒಡನಾಡಿ ಪೂರ್ವಜರನ್ನು ನೆನಸಿಕೊಂಡು ಅವರ ಹೋರಾಟಗಳಿಂದ ಸ್ಪೂರ್ತಿ ಪಡೆಯುತ್ತೇವೆ. ಮಾಲೀಕ ವರ್ಗದ ಸುಲಿಗೆಯ, ಜಾತಿ ಶೋಷಣೆಯ, ಧಾರ್ಮಿಕ ದ್ವೇಶ/ಮತಾಂಧತೆಯ, ಕೋಮುವಾದ/ಲಿಂಗಾಧಾರಿತ ಹಿಂಸೆಯ ವಿರುದ್ಧ, ಲೂಟಿಕೋರರ ವಿರುದ್ಧ ಹಾಗೂ ಸಾಮಾಜಿಕ ಸಂಪತ್ತಿನ ಖಾಸಗೀಕರಣದ ವಿರುದ್ಧದ ಹೋರಾಟದಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಲು ಈ ಮೇ ದಿನ ಶಪತ ಮಾಡುತ್ತೇವೆ.

**ಗಾರ್ಮೆಂಟ್ ಕಾರ್ಮಿಕರ ಕೊಡುಗೆ, ಮಾಲೀಕರ ಸುಲಿಗೆ.**

ಸಾಮಾಜಿಕ ಬದುಕಿನಲ್ಲಿ ಗಾರ್ಮೆಂಟ್ ಉತ್ಪಾದನೆಯು ಒಂದು ಮೂಲಭೂತ ಅವಶ್ಯಕತೆಯಾಗಿರುತ್ತದೆ. ಹಾಗಾಗಿ ಗಾರ್ಮೆಂಟ್ಸ್ ಕಾರ್ಮಿಕರ ಕೆಲಸವು ಸಮಾಜಕ್ಕೆ ಅತೀ ಅಮೂಲ್ಯವಾದದ್ದು ಮತ್ತು ಕಾರ್ಖಾನೆ ಮಾಲೀಕನಿಗೆ ಅತೀ ದೊಡ್ಡ ಲಾಭಗಳಿಸುತ್ತದೆ. ಆದಾಗ್ಯು ಗಾರ್ಮೆಂಟ್ ಕಾರ್ಮಿಕರು ಬಡತನದ ಹೀನಾಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇದು ಘೋರ ಸಾಮಾಜಿಕ ಅನ್ಯಾಯ. ಈ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲಾ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿರುವಾಗ, ಅತ್ಯಮೂಲ್ಯ ಉತ್ಪಾದನೆಯಲ್ಲಿ ತೊಡಗಿರುವ ಗಾರ್ಮೆಂಟ್ಸ್ ಕಾರ್ಮಿಕರ ಶ್ರಮದ ಬೆಲೆ ಇಳಿಮುಖವಾಗಲು/ಸ್ಥಗಿತಗೊಳ್ಳಲು ಕಾರಣವೇನು ?

ಉತ್ತಮ ಕೂಲಿಗಾಗಿ ಹಾಗೂ ಉತ್ತಮ ಬದುಕಿಗಾಗಿ ಮಾಲೀಕರೊಂದಿಗೆ ಹಾಗೂ ಸರಕಾರದೊಂದಿಗೆ ಚೌಕಾಸಿ ಮಾಡುವ ಅರ್ಹತೆ, ಸಾಮರ್ಥ್ಯತೆಯ ಕೊರತೆ ನಮ್ಮಲ್ಲಿದೆಯೇ? ಪ್ರತೀ ಸರ್ಕಾರವು ಗಾರ್ಮೆಂಟ್ ಕಾರ್ಖಾನೆ ಮಾಲೀಕರಿಗೆ ಅವರ ಕಷ್ಟಗಳನ್ನು ಅರ್ಥ ಮಾಡಿಕೊಂಡು ಹಲವಾರು ರಿಯಾಯಿತಿಗಳು ಮತ್ತು ಸವಲತ್ತುಗಳನ್ನು ಸಮಾಜದ ಹಣದಿಂದ ನೀಡುತ್ತಿರುವುದು ಕಾಣಬಹುದು. ಆದರೆ ಸಾವಿರಾರು ಸಂಖ್ಯೆಯಲ್ಲಿರುವ ನಿಜವಾದ ಉತ್ಪಾದಕರಾದ ಕಾರ್ಮಿಕರ ಬದುಕಿನ ರಕ್ಷಣೆಗಾಗಿ ಯಾವುದೇ ಯೋಜನೆಗಳ ಗಂಭೀರವಾದ ಅನುಷ್ಠಾನ ಕಾಣುತ್ತಿಲ್ಲ. ಸಮಾಜಕ್ಕೆ ಅತ್ಯವಶ್ಯವಿರುವ ವಸ್ತುವನ್ನು ಉತ್ಪಾದಿಸುವ ನಮಗೆ, ಉತ್ತಮ ವೇತನ, ಗೌರವಯುತ ಕೆಲಸದ ಶರತ್ತುಗಳು, ಆರೋಗ್ಯದ ವ್ಯವಸ್ಥೆ, ಯೋಗ್ಯ ಹಾಗೂ ಸಮರ್ಥ ವಸತಿ ಸೌಕರ್ಯ ಮತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಪಡೆಯುವ ಅರ್ಹತೆ ಹಾಗೂ ಅಧಿಕಾರ ಖಂಡಿತವಾಗಿಯೂ ಇದೆ. ಇದನ್ನು ಪಡೆದುಕೊಳ್ಳಬೇಕಾದರೆ **ಡಾ/ ಬಿ. ಆರ್. ಅಂಬೇಡ್ಕರ್ ರವರು ಹೇಳಿದ ಹಾಗೆ, ನಮಗಿರುವುದು ಒಂದೇ ದಾರಿ ಅರಿವು ಪಡೆದು, ಸಂಘಟಿತರಾಗಿ ಹೋರಾಡುವುದು.**

**ನಾವು ಒಬ್ಬೊಂಟಿಯಲ್ಲ ! ನಮಗೆ ಭಯವಿಲ್ಲ ! ಪ್ರಪಂಚದಾದ್ಯಂತ ಲಕ್ಷಕೋಟಿ ಸಂಖ್ಯೆಯಲ್ಲಿದ್ದೇವೆ !**
**ನ್ಯಾಯ ಮತ್ತು ಸಮಾನತೆ ಆಧಾರಿತ ಹೊಸ ಸಮಾಜವನ್ನು ಕಟ್ಟೋಣ!**

## ಬನ್ನಿ ಕಾರ್ಮಿಕ ಸಂಗಾತಿಗಳೆ ಒಂದಾಗೋಣ !

**ಮೇ ದಿನ ಆಚರಣೆಯ ಅಂಗವಾಗಿ ಮಕ್ಕಳ ಕೌಶಲ್ಯ ಪ್ರದರ್ಶನ, ಬೀದಿ ನಾಟಕ ಮತ್ತು ಚರ್ಚೆ**
**20.05.2017 (ಶನಿವಾರ) ಸಂಜೆ 5 ಗಂಟೆಯಿಂದ ಮೈಸೂರು ರಸ್ತೆಯ ಮುತ್ತುರಾಯನಗರದ ಬಳಿ.**
**21.05.2017 (ಭಾನುವಾರ) ಬೆಳಗ್ಗೆ 10 ಗಂಟೆಯಿಂದ ರೇಣುಕಾದೇವಿ ಯಲ್ಲಮ್ಮ ದೇವಸ್ಥಾನ, ತಾವರೆಕೆರೆ.**
**(ತಮ್ಮ ಮಕ್ಕಳನ್ನು ಕೂಡಲೆ ನೋಂದಾಯಿಸಿ.)**





# MAY DAY

## International Workers Day.

KARNATAKA GARMENT WORKERS UNION

**May Day** was born out of the unity and the victories of the Working Class. Workers overcame distances & differences of Region, National borders, Religion, Ethnicity and Caste; The heroic struggles & sacrifices of our sisters & brothers won for us the 8-hour working day, leave facilities, gratuity, bonus, overtime allowance, ESI, PF and many more rights as workers.

This May Day workers from garments, construction, sanitation, senior citizens and other sectors supported the struggle of domestic workers against inhuman working conditions and demanded for one day weekly off at NGV Koramangala.

Our dream is to build a humane society, where there is full employment, decent and respectful work, living wages, public distribution of essentials, affordable housing, health care and education for all and pension for a retired life with dignity.

We will continue the struggle, to strengthen unity of workers, to fight against exploitation by employers, caste oppression, religious bigotry, gender violence, communal hatred and privatization of social wealth.

## WorkersU n i t e !

*************************************************************

**गार्मेंट श्रमिकों का योगदान, मालिकों का फिरौति**

सामाजिक जीवन से गार्मेंट उत्पादन एक मूलभूत अवश्यकता हैं । ईसलिये गार्मेंट श्रमिकों का काम समाज के लिये अति अमूल्य हैं और कारखाने मालिकों को सबसे बडा लाभ देता हैं । फिर भी गार्मेंट श्रमिकों गरीवी कुचल परिस्थिति में जी रहे हैं । यह घोर सामाजिक अन्याय हैं । इस पूंजिवादि आर्थिक व्यवस्था में, सभी वस्तुओं का कीमत दिन से दिन बड रहा हैं । और बहुमूल्य उत्पादन मे लगे हुए गार्मेंट श्रमिकों का श्रम कि कीमत गिरबट/स्थगित होनेका कारण क्या हैं ।

हमें सरकार और मालिक वर्ग के साथ योग्य वेतन और योग्य जीवन स्थितियों के लिये सौदा करने की क्षमता और नियोक्ता की कमि हैं क्या ? हर सरकार, गार्मेंट उध्योग कि मालिकों का समस्याओं को समजके, सार्वजनिक धन से बहुत स रियायतें और सुविधायें जो दे रहा हैं, हम देख सकते हैं । लेकिन लाखों संख्या मे असली उत्पादकों, श्रमिकों का जीवन का रक्शण के लिये कोई योजना का गंभीर प्रतीत नहीं होता हैं । समाज को अती अवश्य रहने वाला वस्तुओं को उत्पादन करने वाले हमारे को, योग्य वेतन, स्वस्थ व्यवस्था, योग्य और समर्थ आवास सौकर्य और बच्चों को गुण्वत्ता शिक्शण प्राप्त होने का अर्हता और अधिकार है । यह प्राप्त करने के लिये डां बी. आर. अंबेडकर ने कहा, हमारे पास ऐक ही रास्ता हैं ज़्यान पाकर, संघटित होकर संघर्ष करना ।

हम अकेले नहीं हैं । हम को डर नहीं हैं । दुनिया में लाखों-करोडों संख्या में हैं ।

न्याय और समानता के आथारित पर नया समाज निर्माण करेंगे ।

## आवो श्रमिक साथियों एकझुट हौंगे ।

**ನಿಮ್ಮ ಭವಿಷ್ಯದ ಮೇಲೆ ನಂಬಿಕೆ ಇಡಬೇಡಿ: ನಿಮ್ಮ ಶ್ರಮದ ಮೇಲೆ ನಂಬಿಕೆ ಇಡಿ – ಡಾ॥ ಬಿ. ಆರ್. ಅಂಬೇಡ್ಕರ್.**
**Do not depend on your fate: trust in your labour Dr॥ B. R. Ambedkar.**
**अपना किस्मत पर विष्वास न रखें: अपना श्रम पर विष्वास रखें डा॥ बि. आर. अम्बेडकर.**

**ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ಕೂಗು] (ರಿ).**
**# 9/12, 4ನೇ ಅಡ್ಡರಸ್ತೆ, 15ನೇ ಮುಖ್ಯರಸ್ತೆ, ರಾಜಪ್ಪರೆಡ್ಡಿ ಬಿಲ್ಡಿಂಗ್, ಎನ್.ಜಿ.ಆರ್. ಬಡಾವಣೆ,**
**ರೂಪೇನ ಅಗ್ರಹಾರ, ಹೊಸೂರು ರಸ್ತೆ, ಬೆಂಗಳೂರು – 68.**
**ಮೊಬೈಲ್ : 9743462299 / 9880016173 / 8892374338 / 7892766378**



[redacted]

## ಲೈಂಗಿಕ ಕಿರುಕುಳ

### ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರಿಕುಳ ತಡೆ, ರಕ್ಷಣೆ ಮತ್ತು ಪರಿಹಾರ ಕಾಯ್ದೆ 2013 ರ ಮುಖ್ಯಾಂಶಗಳು

**ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಎಂದರೆ :-** ಲೈಂಗಿಕ ಸ್ವರೂಪ ಇರುವ 0ಯಾವುದೇ ಬೇಡದ ಮಾತುಗಳು ಅಥವಾ ಕ್ರಿಯೆಗಳು, ಯಾವುದೇ ರೀತಿಯ ಸ್ವಾಗತವಲ್ಲದ/ ಸಹಿಸಲಾರದ ಲೈಂಗಿಕ ನಡತೆಯನ್ನು ತೋರ್ಪಡಿಸುವುದು. ಉಧಾಹರಣೆಗೆ:

- ಮೈ ಮುಟ್ಟಲು ಪ್ರಯತ್ನಿಸುವುದು
- ಲೈಂಗಿಕ ಆಸಕ್ತಿಯನ್ನು ಪೂರೈಸುವಂತೆ ಒತ್ತಾ0ಯಿಸುವುದು, ಬೆದರಿಸುವುದು, ಅವಮಾನಿಸುವುದು;
- ಮಹಿಳೆಯರ ವೇಷಭೂಷಣಗಳ ಮತ್ತು ಅಂಗಾಂಗಗಳ ಬಗ್ಗೆ ಅಶ್ಲೀಲವಾಗಿ ಟೀಕಿಸುವುದು.
- ಅಶ್ಲೀಲವೆನ್ನಿಸುವ ಸಾಹಿತ್ಯ, ಚಿತ್ರ, ಫೋಟೊ ತೋರಿಸುವುದು
- ಲೈಂಗಿಕ ಉದ್ದೇಶವನ್ನು ಹೊಂದಿರುವ ಹಾಸ್ಯ ಚಟಾಕಿಗಳನ್ನು ಹಾರಿಸುವುದು ಅಥವಾ ಚರ್ಚಿಸುವುದು
- ಫೋನಿನಲ್ಲಿ ಅಶ್ಲೀಲವಾಗಿ/ದ್ವಂದ್ವಾರ್ಥದ ರೀತಿ0ಯಲ್ಲಿ ಮಾತನಾಡುವುದು, ಎಸ್. ಎಮ್.ಎಸ್ ಕಳುಹಿಸುವುದು ಅಥವಾ ಇನ್ನಾವುದೇ ರೀತಿ0ಯಲ್ಲಿ ಸಂಪರ್ಕ ಮಾಡುವುದು.
- ಸ್ವಾಗತವಲ್ಲದ ಲೈಂಗಿಕ ಭಾವನೆಗಳುಳ್ಳ ಸನ್ನೆ, ಚಿಹ್ನೆ, ಮಾತು ವ್ಯಕ್ತ ಪಡಿಸುವುದು
- ಗೂಢಾರ್ಥದಲ್ಲಿ ಅಥವಾ ಅಶ್ಲೀಲವಾಗಿ ಮಾತನಾಡುವುದು
- ಕೆಟ್ಟ ದೃಷ್ಟಿಯಲ್ಲಿ ನೋಡುವುದು ;
- ಮಾಲೀಕರು ಆಮಿಷವನ್ನು ಒಡ್ಡಿ ಲೈಂಗಿಕ ಕಿರುಕುಳ ಮಾಡುವುದು.

**ಲೈಂಗಿಕ ಕಿರುಕುಳವನ್ನು ಯಾವುದೇ ಕಾರಣಕ್ಕೂ ಸಹಿಸಬೇಡಿ!**
**ತಿರುಗಿ ಸವಾಲು ಹಾಕಿದೇ ಹೊರತು ಕಿರುಕುಳ ನಿಲ್ಲುವುದಿಲ್ಲ ಎಂದು ತಿಳಿದಿರಲಿ!**

**ಕೂಡಲೆ ಕಿರುಕುಳದ ಘಟನೆಯನ್ನು ಸ್ಥಳೀಯ ಸಮಿತಿಗೆ ಹಾಗೂ ಯೂನಿಯನ್ನಿನ ಪದಾಧಿಕಾರಿಗಳ ಗಮನಕ್ಕೆ ತಂದು ದೂರು ದಾಖಲಿಸಲು ಹಾಗೂ ಸಾಮೂಹಿಕ ಪ್ರತಿಭಟನೆಗೆ ಬೆಂಬಲ ಪಡೆಯಿರಿ !**

**ನಮ್ಮ ಮಕ್ಕಳನ್ನೂ ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಅಶ್ಲೀಲ ರಚನೆಗಳಿಂದ ರಕ್ಷಿಸೋಣ ಇದಕ್ಕೆ ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ (ಪೋಕ್ಸೋ) ಕಾನೂನು 2012 ಇದೆ. ಸಹಾಯಕ್ಕಾಗಿ ಸಂಪರ್ಕಿಸಿ : 1098**





## ಕೌಟುಂಬಿಕ ಹಿಂಸೆಯಿಂದ ಮಹಿಳೆಯರಿಗೆ ರಕ್ಷಣೆ ಕಾಯ್ದೆ, 2005

**ಕೌಟುಂಬಿಕ ಹಿಂಸೆ ಎಂದರೇನು?**

ನಾಲ್ಕು ಗೋಡೆಗಳ ಮಧ್ಯೆ ಮನೆಯಲ್ಲಿಯೇ ನಡೆ0ಯುವ ಹಿಂಸೆ. ಅದು ಯಾವುದೇ ಮಹಿಳೆಯ ವಿರುದ್ಧ ಅವಳು ವಾಸ ಮಾಡುವ ಮನೆಯಲ್ಲಿನ ಯಾವುದೇ ಪ್ರಾಪ್ತ ವಯಸ್ಕ ಪುರುಷ ಅಥವ ಮಹಿಳೆಯಿಂದ ಆಗುವಂತಹ ಕೃತ್ಯ ಕೌಟುಂಬಿಕ ಹಿಂಸೆ ಎಂದರೆ ಅದು ಕೇವಲ ಹೊಡೆತ – ಬಡಿತ , ಬೈಗುಳ ಮಾತ್ರವಲ್ಲ; ತೆಗಳುವುದು. ಅವಮಾನಿಸುವುದು; ನಿಬಂಧನೆ ಹಾಕುವುದು; ಊಟಕ್ಕೆ, ಬಟ್ಟೆಗೆ, ಓಡಾಡುವುದಕ್ಕೆ ಹಣ ಕೊಡದಿರುವುದು; ಹೆದರಿಸುವುದು. ಬೆದರಿಸುವುದು; ಮಹಿಳೆಗೆ ಸಂಬಂಧಿಸಿದ ಒಡವೆ, ಹಣ, ಆಸ್ತಿ ತೆಗೆದುಕೊಳ್ಳುವುದು; ಮಕ್ಕಳಿಂದ ದೂರ ಮಾಡುವುದು; ನಿರ್ಲಕ್ಷ್ಯ ಮಾಡುವುದು; 0ಯಾವುದೇ ಸೌಲಭ್ಯ / ಪ್ರಯೋಜನ ಪಡೆ0ಯಲು ಅಡ್ಡಿ ಹಾಕುವುದು; ಇವೆಲ್ಲವೂ ಕೌಟುಂಬಿಕ ಹಿಂಸೆ ಎನಿಸಿಕೊಳ್ಳುತ್ತದೆ.

ಒಟ್ಟಾರೆಯಾಗಿ ಕೌಟುಂಬಿಕ ಹಿಂಸೆ ಎಂದರೆ ಅದು– ದೈಹಿಕ, ಮಾನಸಿಕ, ಮೌಖಿಕ, ಭಾವನಾತ್ಮಕ, ಲೈಂಗಿಕ ಮತ್ತು ಆರ್ಥಿಕಹಿಂಸೆ ಇವೆಲ್ಲವುಗಳನ್ನೂ ಕೌಟುಂಬಿಕ ಹಿಂಸೆ ಎಂದು ಕರೆಯಲಾಗುತ್ತದೆ.

ಯಾವುದೇ ಮಹಿಳೆ ಕೌಟುಂಬಿಕ ಹಿಂಸೆಗೆ ಒಳಗಾದ ಸಂದರ್ಭದಲ್ಲಿ ಈ ಕೆಳಕಂಡವರಲ್ಲಿ ದೂರನ್ನು ದಾಖಲಿಸಬಹುದಾಗಿದೆ.

- ದಂಡಾಧಿಕಾರಿಗಳು
- ರಕ್ಷಣಾಧಿಕಾರಿಗಳು
- ಪೋಲೀಸ್ ಅಧಿಕಾರಿಗಳು
- ಸಮಾಜ ಸೇವಾ ಕಾರ್ಯಕರ್ತರು

ಯಾವುದೇ ಮಹಿಳೆ ಕೌಟುಂಬಿಕ ಹಿಂಸೆಗೆ ಒಳಗಾದಾಗ, ಕೌಟುಂಬಿಕ ಹಿಂಸೆಯ ದೂರನ್ನು ದಾಖಲಿಸಿದ ನಂತರ, ಶೀಘ್ರವೇ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

- ಆಶ್ರಯ ತಾಣ / ತಂಗುದಾಣ
- ಉಚಿತ ವೈದ್ಯಕೀಯ ಸೌಲಭ್ಯ
- ಉಚಿತ ವಕೀಲರ ಸೇವೆ
- ರಕ್ಷಣೆ

ಈ ಕಾಯ್ದೆಯಡಿಯಲ್ಲಿ ಯಾವುದೇ ಪ್ರಕರಣದ ದೂರು ನ್ಯಾಯಾಲಯದಲ್ಲಿ ದಾಖಲಾದರೆ, ಅತಿ ಶೀಘ್ರವಾಗಿ ಅಂದರೆ 60 ದಿನಗಳಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಈ ಕಾಯ್ದೆ ಹೇಳುತ್ತದೆ. ಹಾಗೂ ಈ ಕೆಳಗೆ ನಮೂದಿಸಿರುವ ಆಜ್ಞೆಗಳನ್ನು ಪಡೆಯಬಹುದಾಗಿದೆ.

- ರಕ್ಷಣೆಯ ಆಜ್ಞೆ
- ವಾಸದ ಹಕ್ಕು
- ಜೀವನಾಂಶದ ಆಜ್ಞೆ
- ನಷ್ಟ ಪರಿಹಾರದ ಆಜ್ಞೆ
- ಮಕ್ಕಳ ಅಭಿರಕ್ಷೆಯ ಆಜ್ಞೆ

ನ್ಯಾಯಾಲಯದಲ್ಲಿ ಇಂತಹ ಆಜ್ಞೆಗಳನ್ನು ಪಡೆದರೆ, ಅವುಗಳನ್ನು ಕಾರ್ಯರೂಪಕ್ಕೆ / ಅನುಷ್ಠಾನಕ್ಕೆ ತರಲು ರಕ್ಷಣಾಧಿಕಾರಿಗಳು ಸಹಾಯ ಮಾಡುತ್ತಾರೆ.

**ಈ ಕಾಯ್ದೆಯು ಅತೀ ವಿಶಿಷ್ಟವಾಗಿದ್ದು, ಮಹಿಳೆಯರು ಮಾತ್ರ ಈ ಕಾನೂನಿನ ಪ್ರಯೋಜನ ಪಡೆಯಬಹುದಾಗಿದೆ !!**

**ಮಹಿಳೆಯರೇ ಎಚ್ಚೆತ್ತುಕೊಳ್ಳಿ !! ನಿಮ್ಮ ಮೇಲೆ ನಡೆಯುವ ದೌರ್ಜನ್ಯದ ಕುರಿತು ಯೂನಿಯನ್‌ನ ಸ್ಥಳೀಯ ಜಾಗೃತ ದಳಕ್ಕೆ ತಿಳಿಸಿ**



[redacted]

# ಗೌರವಯುತ ಸಾಮೂಹಿಕ ಚೌಕಾಸಿಗಾಗಿ!

ಆತ್ಮೀಯ ಸಂಗಾತಿಗಳೇ,

ದಿನಾಂಕ 18.2.18 ರಂದು ನಡೆದ ಆರ್‌ವಿಂದ್ ಕಾರ್ಮಿಕರ ಸರ್ವ ಸದಸ್ಯರ ಸಭೆಯಲ್ಲಿ, ಮ್ಯಾನೇಜ್ಮೆಂಟ್ ಜೊತೆ, ಕೆಲಸದ ಸ್ಥಳದಲ್ಲಿ ಗೌರವಯುತ ವಾತಾವರಣ, ಸಂಬಳ ಹೆಚ್ಚಳ ಮತ್ತು ಉತ್ಪಾದನಾ ಒತ್ತಡಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸಮಯಾವಕಾಶ ಕೋರಬೇಕೆಂದು ತೀರ್ಮಾನಿಸಲಾಯಿತು. ನಂತರದ ದಿನಗಳಲ್ಲಿ, ಸಾವಿರಕ್ಕೂ ಹೆಚ್ಚು ಆರ್‌ವಿಂದ್ ಕಾರ್ಮಿಕರು, ಯೂನಿಯನ್ ಮತ್ತು ಚುನಾಯಿತ ಕಾರ್ಮಿಕ ಪ್ರತಿನಿಧಿಗಳು ಆಡಳಿತ ವರ್ಗದವರೊಂದಿಗೆ ಚರ್ಚಿಸಲು ಸಮ್ಮತಿ ಪತ್ರದಲ್ಲಿ ಸಹಿ ಮಾಡಿದರು.
[illegible] ಶಾಹಿ 8 ರಲ್ಲಿ ಅಲ್ಲಿನ ಕಾರ್ಮಿಕ ಪ್ರತಿನಿಧಿಗಳು ಮತ್ತು ಯೂನಿಯನ್ ವತಿಯಿಂದ ಏಪ್ರಿಲ್ ತಿಂಗಳಲ್ಲಿ [illegible] ಮ್ಯಾನೇಜ್ಮೆಂಟ್ [illegible] ನಿರ್ಲಕ್ಷ್ಯದಿಂದ [illegible] ಯೂನಿಯನ್ ವತಿಯಿಂದ, [illegible] ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿತು. ಮ್ಯಾನೇಜ್ಮೆಂಟ್ ಮತ್ತು ಯೂನಿಯನ್ (ಶಾಹಿ 8 ರ ಚುನಾಯಿತ ಕಾರ್ಮಿಕ ಪ್ರತಿನಿಧಿಗಳನ್ನೊಳಗೊಂಡಂತೆ) ನಡುವೆ ಸುಮಾರು 10 ಸಾಮೂಹಿಕ ಚೌಕಾಸಿಯ ಸಭೆಗಳು ನಡೆದವು. [illegible] ಯೂನಿಯನ್ ಮತ್ತು ಆಡಳಿತ ವರ್ಗದವರು ಕಾರ್ಮಿಕರ [illegible] ಒಂದು ಲಿಖಿತ ಒಪ್ಪಂದ ಮಾಡಿಕೊಂಡರು. [illegible]–

1) ಎಲ್ಲಾ ಕಾರ್ಮಿಕರಿಗೆ [illegible] ಕಾರ್ಖಾನೆಯಲ್ಲಿ [illegible] ಸ್ಥಾಪನೆಯಾಯಿತು.
2) ಯೂನಿಯನ್ ಸೇರಿದ್ದಕ್ಕೆ ಕಾರ್ಮಿಕರ ಮೇಲೆ [illegible] ಮಾಡಿದ 5 ಹಿರಿಯ ಮ್ಯಾನೇಜರುಗಳನ್ನು ಕೆಲಸದಿಂದ ವಜಾ ಮಾಡಲಾಯಿತು.
3) [illegible]
4) [illegible] ದಿನಾಂಕ 21.7.2018 ರಂದು, [illegible] ಕಾರ್ಖಾನೆಯಲ್ಲಿನ 5 ಸಮಿತಿಗಳಿಗೆ [illegible]
5) [illegible] ದಿನಾಂಕ 19.07.18 ರಂದು [illegible]
6) ಶಾಹಿ [illegible]

ಶಾಹಿ [illegible] (ಉದಾಹರಣೆಗೆ:H&M; GAP; Levis) [illegible] ದಿನಾಂಕ 24.7.2018 ರಂದು ಆರ್‌ವಿಂದ್ ಕಾರ್ಮಿಕ ಪ್ರತಿನಿಧಿಗಳು, [illegible] ದಿನಾಂಕ: 01.08.2018 ರಂದು ಯೂನಿಯನ್ ಪ್ರತಿನಿಧಿಗಳೊಂದಿಗೆ ಚರ್ಚಿಸಲು ಒಪ್ಪಿಕೊಂಡಿದ್ದಾರೆ.
[illegible]

ಬನ್ನಿ, ಒಂದಾಗೋಣ! ಯೂನಿಯನ್ ಸೇರುವ ಅಧಿಕಾರ, ಗೌರವದಿಂದ ಸಾಮೂಹಿಕ ಚೌಕಾಸಿ ನಡೆಸುವುದು,

**ಸಂವಿಧಾನ ಬದ್ಧಹಕ್ಕು !**

ನೆನಪಿರಲಿ, ಯೂನಿಯನ್ ಸೇರದಂತೆ ಬೆದರಿಸುವುದು ಅಪರಾಧ.

[illegible]

ಆರ್‌ವಿಂದ್ ಲಿಮಿಟೆಡ್ ಕಾರ್ಖಾನೆಯ ಕಾರ್ಮಿಕ ಪ್ರತಿನಿಧಿಗಳು

[illegible]

## ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ [ಕೂಗು]

[illegible]
ದೂ. ಸಂಖ್ಯೆ: ಸ್ವಾಮಿ: 9880016173 ಪ್ರಭಾ: 7338309593 ಸೌಮ್ಯ: 8861447575 ಪೂಜಾ: 8310019622





# ऐक स्म्मानजनक सामूहिक सौदा करने के लिए!

प्रिय साथियों,

दिनांक18.02.2018 में किया गया अरविंद श्रमिकों का सभी सदृस्यों की बैटक में, म्यानेज्मेंट के साथ, कार्यस्थल पर सम्मानजनक वातावरण, वेतन का बडाव और उत्पादन के दबाव पर चर्चा करने के लिऐ समय पूचने का फैसला किया गया है! बाद में, हजारों से ज्यादा अरविंदश्रमिको ; यूनियन और चुनावित प्रतिनिधियों म्यानेजमेंट से चर्चा करने के लिए सम्मति पत्र में हस्ताक्षर किया है!

इसके बीच में, इसी तरह समय पूचकर, शाही 8 में वहां के श्रमिक प्रतिनिधियों और यूनियन से एप्रिल महिनें में अनुरोध जारी किया गया था! शुरुआत में, वहां के म्यानेजमेंट, अनुरोध को अज़्नानता से अनदेखा किया गया था! यूनियन से, बहुत दबाव लाने के बाद, शाहि मुख्य कार्यालय से सकारात्मक प्रतिक्रिया मिला! म्यानेज्मेंट और यूनियन (शाही 8 का चुनावित प्रतिनिधीयों सहित) के बीचमें लगभग 10 सामूहिक सौदा बैटक हुई!

इस परिणाम, यूनियन और प्रशासन वर्ग श्रमिकों दुतों कि उपस्थिति में एक लिखित समजोता किया गया था! इस संबंध में इन उपायों कु पहलेसे ही शुरू किया गया था!

1. सभी श्रमिकों के लिए स्वछ पानी के लिए कारखाना में जल शोधन इकाई की स्थापना की गई थि!
2. यूनियन में शामिल होने के कारण,श्रमिको 'पे किया हुआ 5 वरिष्ट प्रबंधकोंको काम से निकाल दिया गया है!
3. कारखाना में ब्रांड की उपस्थितियों में, श्रमिकों स्वयं इच्चापर यूनियन में शामिल होने में शाही कंपनी को कोई विरोध नही है बोल करके पब्लिक में लाउड्स्पीकर प्रणाली के माध्यम से सार्वजनिक रूप से सभी श्रमिकों को पदोन्नति किया गया है! श्रमिक यूनियन में सदस्यता के लिऐ मुक और पूर्ण प्रधिकरण करके घोषण किया गया है!
4. समझोते आवेदन पर, दिनांक: 21.07.2018 पर, सभी को प्रतिस्पर्धि करने के लिये शुल्क अवसर करें, कारखाने में 5 समितियों के लिऐ, गोपनिय मतदान चुनाव द्वरा समितियों का पुनः निर्माण करके श्रमिक प्रतिनिधित्व कि गुण्वता सुधार भी किया हैं!
5. समझौते आवेदन पर,महि ने में कम से कम एक बार युनियन/श्रमिक प्रतिनिधियों के साथ बैटक आयोजित करने का कैसला किया है! और पहलि बैटक दिनांक: 19.07.2018 को आयोजित की गयी थि! उस बैटक एकजुटता से की गयि और सकारात्मक नतीजे मिला!
6. शाही कारखाना के सभी म्यानेजर, सूपरवैजरों को श्रमिकों के साथआदरसे बर्ताव करने के प्रशिक्षण शुरू किया जारहा है!

शाही कंपनि की तरह, अरविंद कंपनि भी अंतरष्ट्रीय ब्रांडों को (उदहरण:H&M; GAP; Levis) कपडे बनाते है! शाही 8 का सकारात्मक अनुभव की पुष्ट्भूमि में दिनांक: 24.07.2018 में अरविंद श्रमिक प्रतिनिधियों, श्री हनुमंतराव,जेने रल म्यानेजर, यूनियन से अरविंद श्रमिकों कि ओर से चर्चा के लिए समय के लिए पत्र दिया गया है! इस पत्र को सौजन्यता से स्वीकार करके, पत्र के विषय को दिनांक: 01.08.2018 को यूनियन के प्रतिनिधियों के साथ चर्चा करने के लिए मान लिया है!

यूनियन मानता है कि यह एक महान विकास है! मालिकों का इसतरह समर्थन से, प्रशासन वर्ग के साथ सौदे बाजि से कार्यस्थल में हमारी समस्याओं का समाधान खोजने में विश्वास है!

आओ, एकजुट होंगे! युनियन में शामिल होने का अधिकार, सम्मान से सौदे बाजी करेंगे!

**संविधानिक अधिकार!**

याद रखे, यूनियन में ना शामिल होना बोलना अपराध है!

सेबास्टियन देवराज, माननीय अध्यक्ष — विनोद, अध्यक्ष — रति, उपाध्यक्ष — स्वामि. टि.एस., महासचिव

अरविंद लिमिटेड कार्खाना कार्मिक प्रतिनिधियां

गौतम — महेश — श्रीनिवास — लिंग सांव — मंगल सिंग

## करनाटक गार्मेंट वर्कर्स यूनियन[ कूगु]

#9/12, 4 क्रास रोड, 15 [illegible] होसूर रोड, बेंगलूर-68
फोन नं: स्वामि: 9880016173 प्रभा: 7338309593 सौम्या: 8861447575 पूजा: 8310019622



[redacted]



ನಾವು ಬೆವರನು ಸುರಿಸುವ ದುಡಿಯುವ ಜನ
ನಮ್ಮ ಬೆವರಿನ ಪಾಲನು ಕೇಳುವೆವು
ತುಂಡು ಭೂಮಿಯಲ್ಲ ಒಂದು ದೇಶವಲ್ಲ
ಇಡಿ ಭೂಗೋಳವನೆ ಕೇಳುವೆವು

ಮಗ್ಗಗಳ ಹಿಡಿದೆವು ನೂಲುದಾರ ತೆಗೆದೆವು
ನಮ್ಮ ನರಗಳ ದಾರ ಮಾಡಿ, ಬಟ್ಟಗಳ ನೇಯ್ದೆವು
ಉಡುಪು ಯಾರಿಗೋ, ಚಳಿಯು ಯಾರಿಗೋ
ಯಂತ್ರಗಳ ನಡೆಸಿದೆವು, ಉತ್ಪತ್ತಿ ಹೆಚ್ಚಿಸಿದೆವು,
ನಮ್ಮ ಶಕ್ತಿ ಕರೆಂಟು ಮಾಡಿ, ಫ್ಯಾಕ್ಟರಿಯ ನಡೆಸಿದೆವು
ಕಾರು ಯಾರಿಗೋ, ಕಾಲು ನಡಿಗೆ ಯಾರಿಗೋ........

ಕುಂತ ಮನಗಳೇ, ನಿಂತ ಜನಗಳೇ
ಕೇಳದ ಹೊಸ ನುಡಿ ಕಾಣಾದ ಕೆಂಗೆದಿ ಹೋಯ್
ಹೋರಾಟವೇ ದಾರಿ, ಹೋರಾಟವೇ ದಾರಿ,
ಕೊನೆಗಾಣದ ಬಾಳಿನ ಗೋಳಿಗೆ ಹೋರಾಟವೇ ದಾರಿ (2)

ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೇ ಕಟ್ಟುತೇವಾ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವ.. ನಾವು ಕನಸ ಕಟ್ಟುತ್ತೇವ.. ನಾವು ಮನಸ ಕಟ್ಟುತ್ತೇವ
ಗೋಳಿಲ್ಲದ, ಗುಂಡಿಲ್ಲದ ನಾಡ ಕಟ್ಟುತೇವ
ಕೋಟಿ ಮನಸ್ಸಿನ ನೂರು ಕನಸ್ಸಿನ ಹಾಡ ಬರೆಯುತ್ತೇವ
ಈ ನೆಲದ ಹಾಡ ಬರೆಯುತ್ತೇವ.

ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ,
ಜೀವ ಕೊಡುವ ಜೀವವಿದು, ಕಡಿಮೆ ಯಾರಿಗೆ, ಕಡಿಗೆ ಯಾರಿಗೆ .....
ನಾಚಬೇಡಿ ಹೆಣ್ತನಕೆ ತಲೆಯೆತ್ತಿ ನಿಲ್ಲಿರಿ
ನಾಚಬೇಕು ತುಳಿದವರು, ಮನುಜಾತಿಗೆ ಸೇರಿದವರು ....

ಶಾರಿಗಂಜಿಗಾಗಿ ಸೇರುಬೆವರು ಸುರಿಸುತ್ತಾ
ಊರೂರು ತಿರುಗುವವರ ಯಾರಯ್ಯ ॥
ಈ ನಾಡ ಕಟ್ಟಿದವರು ನಾವೆಲ್ಲಿಗೆ ಹೋಗಬೇಕು
ಕೂಲಿಯವರು ನಾವು ಕೇಳಯ್ಯಾ ॥



[redacted]